ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

ಭಾನುವಾರ, ಆಗಸ್ಟ್ 13, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 91 RNI : 27369/75

janathavani@mac.com
www.janathavani.com
☎ 08192 254736 91642 99999

## ಕಲಾಪ ಕಡಿಮೆ, ಮಸೂದೆ ಅಧಿಕ

**ಲೋಕಸಭೆಯಲ್ಲಿ ಮೂರು ನಿಮಿಷಗಳಲ್ಲೇ ಮಸೂದೆಗಳಿಗೆ ಅಂಗೀಕಾರ**

ನವದೆಹಲಿ, ಆ. 12 - ಮುಂಗಾರು ಅಧಿವೇಶನದಲ್ಲಿ ಲೋಕಸಭೆ ನಿಗದಿತ ಅವಧಿಯ ಶೇ.43ರಷ್ಟು ಕಾಲ ಹಾಗೂ ರಾಜ್ಯಸಭೆ ಶೇ.55ರಷ್ಟು ಕಾಲ ಮಾತ್ರ ಕಾರ್ಯನಿರ್ವಹಿಸಲು ಸಾಧ್ಯವಾಗಿದೆ. ಆದರೆ, ಇದೇ ಅವಧಿಯಲ್ಲಿ 23 ಮಸೂದೆಗಳಿಗೆ ಅಂಗೀಕಾರ ಪಡೆಯಲಾಗಿದೆ.

ಪಿ.ಆರ್.ಎಸ್. ಲೆಜಿಸ್ಲೇಟಿವ್ ರೀಸರ್ಚ್ ವರದಿಯ ಪ್ರಕಾರ, ಲೋಕಸಭೆಯಲ್ಲಿ 17 ಕಲಾಪಗಳನ್ನು ನಡೆಸಲಾಗಿದೆ. ಕಲಾಪದ ಒಟ್ಟು ಅವಧಿ 44 ಗಂಟೆ 15 ನಿಮಿಷ ಆಗಿದೆ. ಅವಿಶ್ವಾಸ ನಿಲುವಳಿಯ ಕುರಿತು 20 ಗಂಟೆ ಚರ್ಚೆ ನಡೆದಿದೆ.

ಮುಂಗಾರು ಅಧಿವೇಶನದಲ್ಲಿ 23 ಮಸೂದೆಗಳಿಗೆ ಅಂಗೀಕಾರ ಪಡೆಯಲಾಗಿದೆ. ಇದರಲ್ಲಿ ರಾಜಧಾನಿ ದೆಹಲಿಯ ಮಸೂದೆ, ಡಿಜಿಟಲ್ ವೈಯಕ್ತಿಕ ಮಾಹಿತಿ ರಕ್ಷಣಾ ಮಸೂದೆ, ಅರಣ್ಯ ಸಂರಕ್ಷಣಾ ತಿದ್ದುಪಡಿ ಮಸೂದೆ, ಗಣಿ ಹಾಗೂ ಖನಿಜ ತಿದ್ದುಪಡಿ ಮಸೂದೆ ಸೇರಿವೆ. ಬಹುತೇಕ ಮಸೂದೆಗಳನ್ನು ಹೆಚ್ಚು ಚರ್ಚೆ ಇಲ್ಲದೇ ಅಂಗೀಕರಿಸಲಾಗಿದೆ.



ಈ ಬಾರಿ ಮಂಡನೆಯಾದ ಶೇ.56ರಷ್ಟು ಮಸೂದೆಗಳಿಗೆ ಉಭಯ ಸದನಗಳಲ್ಲಿ ಅಂಗೀಕಾರ ಪಡೆಯಲಾಗಿದೆ. ಸದನದಲ್ಲಿ ಮಸೂದೆ ಮಂಡನೆಯಾಗಿ ಅಂಗೀಕಾರ ಪಡೆದ ಸರಾಸರಿ ಅವಧಿ 8 ದಿನಗಳಾಗಿದೆ.

ಮಂಡಿಸಲಾದ ಮೂರು ಮಸೂದೆಗಳನ್ನು ಸಮಿತಿಗಳ ಪರಿಶೀಲನೆಗೆ ವಹಿಸಲಾಗಿದೆ.

ದೆಹಲಿ ರಾಜಧಾನಿ ವಲಯದ ಮಸೂದೆಯ ಕುರಿತು ಅತಿ ಹೆಚ್ಚಿನ 4 ಗಂಟೆ 54 ನಿಮಿಷಗಳ ಕಾಲ ಲೋಕಸಭೆಯಲ್ಲಿ ಚರ್ಚೆ ನಡೆದಿದೆ. ರಾಜ್ಯಸಭೆಯಲ್ಲಿ ಎಂಟು ಗಂಟೆ ಕಾಲ ಚರ್ಚೆ ನಡೆದಿದೆ. ಡಿಜಿಟಲ್ ವೈಯಕ್ತಿಕ ಮಾಹಿತಿ ರಕ್ಷಣಾ ಮಸೂದೆ ಕುರಿತು ಲೋಕಸಭೆಯಲ್ಲಿ 56 ನಿಮಿಷ ಹಾಗೂ ರಾಜ್ಯಸಭೆಯಲ್ಲಿ ಒಂದು ಗಂಟೆ ಕಾಲ ಚರ್ಚೆ ನಡೆಸಲಾಗಿದೆ.

ಐಐಎಂ ತಿದ್ದುಪಡಿ ಮಸೂದೆ ಸೇರಿದಂತೆ ಒಂಭತ್ತು ಮಸೂದೆಗಳಿಗೆ 20 ನಿಮಿಷಗಳ ಒಳಗೇ ಲೋಕಸಭೆಯಲ್ಲಿ ಅಂಗೀಕಾರ ಪಡೆಯಲಾಗಿದೆ.

ರಾಷ್ಟ್ರೀಯ ನರ್ಸಿಂಗ್ ಹಾಗೂ ಸೂಲಗಿತ್ತಿ ಆಯೋಗ ಮತ್ತು ರಾಷ್ಟ್ರೀಯ ದಂತ ವೈದ್ಯಕೀಯ ಆಯೋಗ ರಚಿಸುವ ಮಸೂದೆಗಳಿಗೆ ಲೋಕಸಭೆಯಲ್ಲಿ ಮೂರು ನಿಮಿಷಗಳಲ್ಲೇ ಒಪ್ಪಿಗೆ ನೀಡಲಾಗಿದೆ. ಸಿಜಿಎಸ್‌ಟಿ ಹಾಗೂ ಐಜಿಎಸ್‌ಟಿ ತಿದ್ದುಪಡಿ ಮಸೂದೆಗೆ ಲೋಕಸಭೆ ಎರಡು ನಿಮಿಷಗಳಲ್ಲೇ ಒಪ್ಪಿಗೆ ನೀಡಿದೆ.

## ಆರೋಗ್ಯದಿಂದ ದೇಶದ ಆರ್ಥಿಕತೆ



**ಮಾನ್ಸೂನ್ ಫಿಯಸ್ಟ ಸಾಂಸ್ಕೃತಿಕ ಸಂಜೆ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಡಾ. ವೆಂಕಟೇಶ್**

ದಾವಣಗೆರೆ, ಆ. 12 - ದೇಶದ ಜನರು ಆರೋಗ್ಯದಿಂದಿದ್ದಾಗ ಮಾತ್ರ ದೇಶ ನಿರ್ಮಾಣ ಸಾಧ್ಯ. ಆರೋಗ್ಯವಂತರು ದೇಶದ ಆಸ್ತಿ ಇದ್ದಂತೆ. ಹೀಗಾಗಿ ಆರ್ಥಿಕ ಪ್ರಗತಿಯಾಗಬೇಕಾದರೆ ದೇಶದ 140 ಕೋಟಿ ಜನರ ಆರೋಗ್ಯದ ಬಗ್ಗೆ ಅತಿ ಹೆಚ್ಚಿನ ಕಾಳಜಿ ವಹಿಸಬೇಕು ಎಂದು ಜಿಲ್ಲಾಧಿಕಾರಿ ಡಾ. ಎಂ.ವಿ. ವೆಂಕಟೇಶ್ ಹೇಳಿದರು.

ನಗರದ ಜೆ.ಜೆ.ಎಂ. ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿ ಒಕ್ಕೂಟದ ವತಿಯಿಂದ ಆಯೋಜಿಸಲಾಗಿದ್ದ ಮಾನ್ಸೂನ್ ಫಿಯಸ್ಟ ಸಾಂಸ್ಕೃತಿಕ ಸಂಜೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಯಾರಾದರೂ ಅನಾರೋಗ್ಯ ಪೀಡಿತರಾಗಿ ಆಸ್ಪತ್ರೆಗೆ ಬಂದರು ಎಂದರೆ ಅದು ಕೇವಲ ವೈದ್ಯಕೀಯ ಸಮಸ್ಯೆಯಷ್ಟೇ ಆಗಿರುವುದಿಲ್ಲ. ಕೆಲವೊಮ್ಮೆ ಅದು ಸಾಮಾಜಿಕ ಸಮಸ್ಯೆಯ ಸಂಕೇತವೂ ಆಗಿರುತ್ತದೆ. ವರ್ಷದ ಮಗುವೊಂದು ಅಕಾಲಿಕವಾಗಿ ಸಾವನ್ನಪ್ಪಿತು ಎಂದರೆ, ಕೇವಲ ರೋಗವಷ್ಟೇ ಅಲ್ಲದೇ ಅಪೌಷ್ಟಿಕತೆ, ಬಡತನ ಹಲವಾರು ಸಮಸ್ಯೆಗಳಿಂದ ಮಗು ಸಾವಿನ ದವಡೆಗೆ ದೂಡಲ್ಪಟ್ಟಿರಬಹುದು. ಈ ಬಗ್ಗೆಯೂ ವೈದ್ಯರು ಗಮನಿಸಿ ಸಾಮಾಜಿಕ ಸಮಸ್ಯೆಗಳ ಬಗ್ಗೆ ಸಂಬಂಧಪಟ್ಟವರ ಗಮನ ಸೆಳೆಯಬೇಕು ಎಂದವರು ಕಿವಿಮಾತು ಹೇಳಿದರು.

ಇತ್ತೀಚೆಗೆ ಸಿ.ಜಿ. ಆಸ್ಪತ್ರೆಗೆ ಭೇಟಿ ನೀಡಿದಾಗ ನೂರಾರು ಜನ ಡಯಾಲಿಸಿಸ್‌ಗೆ ಬಂದಿದ್ದು ಕಂಡು ಬಂತು. ಇವರಲ್ಲಿ ಚಿಕ್ಕ ವಯಸ್ಸಿನವರೂ ಇದ್ದರು. ಸಕ್ಕರೆ ಕಾಯಿಲೆ ಹಾಗೂ ರಕ್ತದೊತ್ತಡಗಳ (2ನೇ ಪುಟಕ್ಕೆ)

# ವಿದ್ಯುತ್ ಬೇಡಿಕೆ ದಾಖಲೆ ಮಟ್ಟಕ್ಕೆ

## ಉಚಿತ ವಿದ್ಯುತ್ ನಂತರ ಗ್ರಾಹಕರು ಹಾಗೂ ರೈತರಿಂದ ಹೆಚ್ಚುವರಿ ವಿದ್ಯುತ್ ಬಳಕೆ

ಬೆಂಗಳೂರು, ಆ. 12 - ರಾಜ್ಯ ಸರ್ಕಾರ ಗೃಹ ಜ್ಯೋತಿ ಯೋಜನೆಯಡಿ 200 ಯುನಿಟ್‌ವರೆಗೂ ಉಚಿತ ವಿದ್ಯುತ್ ಅನುಷ್ಠಾನಗೊಳ್ಳುತ್ತಿದ್ದಂತೆ ಮತ್ತೊಂದೆಡೆ ಲೋಡ್‌ಶೆಡ್ಡಿಂಗ್ ಪ್ರಾರಂಭವಾಗಿದೆ.

ಗೃಹ ಜ್ಯೋತಿ ಅನುಷ್ಠಾನಗೊಳ್ಳುತ್ತಿದ್ದಂತೆ ವಿದ್ಯುತ್ ಬೇಡಿಕೆ ದಾಖಲೆ ಪ್ರಮಾಣದಲ್ಲಿ 253 ಮಿಲಿಯನ್ ಯೂನಿಟ್ಸ್ ಬೇಡಿಕೆಗೆ ಹೆಚ್ಚಿದೆ.

ಇದೇ ಸಮಯದಲ್ಲಿ ಹವಾಮಾನ ವೈಪರೀತ್ಯ ಮತ್ತು ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಅಗತ್ಯವಾಗಿರುವ ಕಲ್ಲಿದ್ದಲು ಪೂರೈಕೆಯಲ್ಲಿ ಮಿತವ್ಯಯ ಮಾಡಿರುವುದರಿಂದ ವಿದ್ಯುತ್ ಪ್ರಸರಣ ಕಂಪನಿಗಳು ಅನಿವಾರ್ಯವಾಗಿ ಲೋಡ್‌ಶೆಡ್ಡಿಂಗ್ ಮೊರೆ ಹೋಗಿವೆ.

ಉತ್ಪಾದನೆಗೂ-ಬೇಡಿಕೆಗೂ ಅಜಗಜಾಂತರ ವ್ಯತ್ಯಾಸ ಕಂಡು ಬಂದಿರುವುದರಿಂದ ಪ್ರತಿನಿತ್ಯ 3200 ಮೆಗ್ಯಾವ್ಯಾಟ್ ವಿದ್ಯುತ್ ನಷ್ಟು ಲೋಡ್‌ಶೆಡ್ಡಿಂಗ್ ಮಾಡುತ್ತಿದೆ.

ಒಂದೇ ಬಾರಿ ಲೋಡ್‌ಶೆಡ್ಡಿಂಗ್ ಮಾಡುವ ಬದಲು ರಾಜ್ಯದ ವಿವಿಧೆಡೆ ಬೆಳಿಗ್ಗೆಯಿಂದ ರಾತ್ರಿಯವರೆಗೂ ವಿವಿಧ ಹಂತಗಳಲ್ಲಿ ನಾಲ್ಕು ರಿಂದ ಆರು ಬಾರಿ ವಿದ್ಯುತ್ ಲೋಡ್‌ಶೆಡ್ಡಿಂಗ್ ಮಾಡಲಾಗುತ್ತಿದೆ. ಬೇಡಿಕೆಗಿಂತ ಉತ್ಪಾದನೆ ಹೆಚ್ಚಾಗಿ ನೆರೆ ರಾಜ್ಯಗಳಿಗೆ ವಿದ್ಯುತ್ ಮಾರಾಟ ಮಾಡುತ್ತಿದ್ದ ರಾಜ್ಯ ಸರ್ಕಾರ, ಉಚಿತ ವಿದ್ಯುತ್ ಅನುಷ್ಠಾನ ಮತ್ತು ಹವಾಮಾನ ವೈಪರೀತ್ಯದಿಂದ ನಮಗೆ ಬೇಕಾಗಿರುವಷ್ಟು ವಿದ್ಯುತ್ ಉತ್ಪಾದನೆಗೂ ತೊಂದರೆಯಾಗಿದೆ.



**ರಾಜ್ಯದ ವಿವಿಧೆಡೆ ಹಲವು ಹಂತಗಳಲ್ಲಿ ಲೋಡ್ ಶೆಡ್ಡಿಂಗ್**

ಮುಂಗಾರು ಮಳೆ ಕೈಕೊಟ್ಟಿರುವುದರಿಂದ ಮಳೆಗಾಲದಲ್ಲೂ ರೈತರು ಕೃಷಿ ಪಂಪ್‌ಸೆಟ್ ಮೊರೆ ಹೋಗಿರುವುದರಿಂದ ಪ್ರತಿನಿತ್ಯ 50 ರಿಂದ 60 ಮಿಲಿಯನ್ ಯೂನಿಟ್ ಬೇಡಿಕೆ ಹೆಚ್ಚಿದೆ.

ಇದೇ ಕಾಲಕ್ಕೆ ಗೃಹ ಜ್ಯೋತಿ ಅನುಷ್ಠಾನಗೊಂಡ ನಂತರ ಉಚಿತ ವಿದ್ಯುತ್ ಎಂಬುದನ್ನು ಮನಗಂಡು ಗ್ರಾಹಕರು ಹೆಚ್ಚು ಬಳಕೆ ಮಾಡುತ್ತಿದ್ದಾರೆ. ಈ ಮಧ್ಯೆ ಕೇಂದ್ರ ಸರ್ಕಾರ ರಾಜ್ಯಕ್ಕೆ ಅಗತ್ಯವಿರುವ ಕಲ್ಲಿದ್ದಲು ಪೂರೈಕೆಯಲ್ಲಿ ಮಿತವ್ಯಯ ಮಾಡಿರುವುದರಿಂದ ಉಷ್ಣ ಸ್ಥಾವರಗಳು ಪೂರ್ಣ ಪ್ರಮಾಣದಲ್ಲಿ ವಿದ್ಯುತ್ ಉತ್ಪಾದನೆ ಮಾಡುತ್ತಿಲ್ಲ.

ಪವನ ವಿದ್ಯುತ್ ಉತ್ಪಾದನೆಯಲ್ಲೂ ಸಮರ್ಪಕ ಗಾಳಿ ಇಲ್ಲದೆ, ಉತ್ಪಾದನೆ ಕುಸಿತಗೊಂಡಿದೆ. ರಾಜ್ಯದಲ್ಲಿ ಮುಂಗಾರು ಮಳೆ ಕೈಕೊಟ್ಟಿರುವುದರಿಂದ ವಿದ್ಯುತ್ ಉತ್ಪಾದನೆ ಮಾಡುವ ಜಲಾಶಯಗಳಲ್ಲಿ ನೀರಿನ ಪ್ರಮಾಣ ಕುಸಿದಿದೆ.

ಇರುವ ನೀರನ್ನು ಸಂಕಷ್ಟ ಸಮಯದಲ್ಲಿ ಬಳಕೆ ಮಾಡಿಕೊಳ್ಳಲು ಇಲಾಖೆ ತೀರ್ಮಾನಿಸಿರುವುದರಿಂದ ಜಲ ವಿದ್ಯುತ್ ಉತ್ಪಾದನೆಯು ಸಂಪೂರ್ಣವಾಗಿ ಸ್ಥಗಿತಗೊಂಡಿದೆ.

ರಾಜ್ಯ ಸರ್ಕಾರ ಗೃಹ ಜ್ಯೋತಿ ಯೋಜನೆ ಅನುಷ್ಠಾನದ ನಂತರ ವಿದ್ಯುತ್ ಉತ್ಪಾದನೆಯಲ್ಲಿ ನಾನಾ ರೀತಿ ಅಡಚಣೆಯಾಗಿ ರುವುದರಿಂದ ಅನಧಿಕೃತವಾಗಿ ಲೋಡ್‌ಶೆಡ್ಡಿಂಗ್ ಮಾಡಲಾಗುತ್ತಿದೆ. ಬೇಡಿಕೆಗೆ ಅಗತ್ಯವಿರುವ ವಿದ್ಯುತ್ತನ್ನು ನೆರೆರಾಜ್ಯಗಳಿಂದ ಖರೀದಿಸಲು ಯಾವುದೇ ತೀರ್ಮಾನ ಕೈಗೊಳ್ಳದಿರುವುದರಿಂದ ಪ್ರಸರಣ ನಿಗಮಗಳು ಅನಧಿಕೃತ ಲೋಡ್‌ಶೆಡ್ಡಿಂಗ್ ಮಾಡುತ್ತಿವೆ.

ರಾಜ್ಯ ಸರ್ಕಾರವು ಈ ಬಗ್ಗೆ ಯಾವುದೇ ಅಧಿಕೃತ ಪ್ರಕಟಣೆಯನ್ನು ನೀಡಿಲ್ಲ. ಇರುವ ವಿದ್ಯುತ್‌ನಲ್ಲೇ ಸರಿದೂಗಿಸಲು ಅಧಿಕಾರಿಗಳು ಪರದಾಡುತ್ತಿದ್ದಾರೆ.

## ಟೊಮ್ಯಾಟೋ ಪೂರೈಸಲು ಮಾರುಕಟ್ಟೆ ಕೇಳಿದ ನೇಪಾಳ

**ಅನಧಿಕೃತ ಟೊಮ್ಯಾಟೋ ಪೂರೈಕೆಯಿಂದ ನೇಪಾಳದಲ್ಲಿ ಕೊರತೆ**

ಕಠ್ಮಂಡು, ಆ. 12 - ಭಾರತಕ್ಕೆ ಟೊಮ್ಯಾಟೋಗಳನ್ನು ದೀರ್ಘಾವಧಿಗೆ ಸಗಟು ಪೂರೈಕೆ ಮಾಡಲು ಸಿದ್ಧವಿರುವುದಾಗಿ ಹೇಳಿರುವ ನೇಪಾಳ, ಇದಕ್ಕಾಗಿ ಸುಲಭ ಮಾರುಕಟ್ಟೆ ಕಲ್ಪಿಸಬೇಕು ಎಂದು ಕೇಳಿದೆ.

ಟೊಮ್ಯಾಟೋ ಬೆಲೆ ತೀವ್ರ ಹೆಚ್ಚಳ ವಾಗುತ್ತಿರುವ ಹಿನ್ನೆಲೆಯಲ್ಲಿ, ನೇಪಾಳದಿಂದ ಟೊಮ್ಯಾಟೋ ಆಮದು ಮಾಡಿಕೊ ಳ್ಳುವುದಾಗಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದರು.

ದೇಶದ ಹಲವೆಡೆ ಟೊಮ್ಯಾಟೋ ಬೆಲೆ ಕೆಜಿಗೆ 242 ರೂ.ಗಳವರೆಗೆ ತಲುಪಿದೆ. ಈ ಹಿನ್ನೆಲೆಯಲ್ಲಿ ಮೊದಲ ಬಾರಿಗೆ ಟೊಮ್ಯಾಟೋ ಆಮದಿಗೆ ನಿರ್ಧರಿಸಲಾಗಿದೆ.

ನೇಪಾಳದಿಂದ ಟೊಮ್ಯಾಟೋ ತರಿಸಲು ಸುಲಭದ ಮಾರುಕಟ್ಟೆ ಹಾಗೂ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಬೇಕು ಎಂದು ನೇಪಾಳದ ಕೃಷಿ ಸಚಿವಾಲಯದ ವಕ್ತಾರೆ ಶಬ್ನಂ ಶಿವಕೋಟಿ ಹೇಳಿದ್ದಾರೆ.

ನೇಪಾಳ ಕಳೆದ ವಾರದಿಂದಲೇ ಟೊಮ್ಯಾಟೋ ರಫ್ತು ಆರಂಭಿಸಿದೆ. ಆದರೆ, ದೊಡ್ಡ ಪ್ರಮಾಣದಲ್ಲಿ ಪೂರೈಕೆಯಾಗುತ್ತಿಲ್ಲ. ಹೆಚ್ಚಿನ ಟೊಮ್ಯಾಟೋಗೆ ವ್ಯವಸ್ಥೆ ಮಾಡಬೇಕಿದೆ ಎಂದು ವಕ್ತಾರೆ ಹೇಳಿದ್ದಾರೆ. (2ನೇ ಪುಟಕ್ಕೆ)

## ಜನರಿಕ್ ಔಷಧಿ ಸಲಹೆ ಕಡ್ಡಾಯ

**ಸಲಹೆ ನೀಡದ ವೈದ್ಯರಿಗೆ ದಂಡ ಅಥವಾ ಅಮಾನತ್ತು**

ನವದೆಹಲಿ, ಆ. 12 - ಎಲ್ಲಾ ವೈದ್ಯರು ಜನರಿಕ್ ಔಷಧಿಗಳ ಸಲಹೆ ನೀಡಬೇಕಿದೆ. ಇಲ್ಲ ವಾದರೆ ದಂಡ ವಿಧಿಸಲು ಹಾಗೂ ಅವರ ಅನುಮತಿ ಅಮಾನತ್ತಿಗೆ ಕ್ರಮ ತೆಗೆದುಕೊಳ್ಳಲಾಗು ವುದು ಎಂದು ರಾಷ್ಟ್ರೀಯ ವೈದ್ಯಕೀಯ ಆಯೋಗದ ಹೊಸ ನಿಯಮಗಳಲ್ಲಿ ತಿಳಿಸಲಾಗಿದೆ. ಆಯೋಗವು ವೈದ್ಯರಿಗಾಗಿ ವೃತ್ತಿ ನಿಯಮಗಳನ್ನು ಪ್ರಕಟಿಸಿದ್ದು, ಔಷಧದ ಸಲಹೆ ನೀಡುವಾಗ ಬ್ರಾಂಡ್ ಹೊಂದಿರುವ ಜನರಿಕ್ ಔಷಧಿಗಳನ್ನು ಬಳಸುವುದರಿಂದ ದೂರವಿರಬೇಕು ಎಂದು ತಿಳಿಸಲಾಗಿದೆ.

ಈ ಹಿಂದೆ 2002ರಲ್ಲಿ ಭಾರತೀಯ ವೈದ್ಯಕೀಯ ಮಂಡಳಿ ಪ್ರಕಟಿಸಿದ್ದ ನಿಯಮಗಳಲ್ಲಿ ಜನರಿಕ್ ಔಷಧಿಯ ಬಗ್ಗೆ ಉಲ್ಲೇಖವಿತ್ತು. ಆದರೆ, ಯಾವುದೇ ಕ್ರಮದ ಪ್ರಸ್ತಾವನೆ ಇರಲಿಲ್ಲ. ಆಗಸ್ಟ್ 2ರಂದು ವೈದ್ಯಕೀಯ ಆಯೋಗದ ನಿಯಮಗಳನ್ನು ಪ್ರಕಟಿಸಲಾಗಿದೆ. ಜನರಿಕ್ ಔಷಧಿಗಳು ಬ್ರಾಂಡೆಡ್ ಔಷಧಿಗಳಿಗಿಂತ ಶೇ.80ರವರೆಗೆ ಕಡಿಮೆ ಬೆಲೆ ಹೊಂದಿವೆ. ಹೀಗಾಗಿ ಜನರಿಕ್ ಔಷಧಿಗಳನ್ನು ನೀಡುವುದರಿಂದ ಚಿಕಿತ್ಸೆಯ ವೆಚ್ಚ ಕಡಿಮೆಯಾಗಲಿದೆ ಎಂದು ತಿಳಿಸಲಾಗಿದೆ.

## ಬದಲಾದ ದಂಡ ಸಂಹಿತೆ: 420ಕ್ಕೆ ತೆರೆ

ನವದೆಹಲಿ, ಆ. 12 - ಹಲವು ಪೀಳಿಗೆಗಳಿಂದ '420' ಎಂಬುದು ವಂಚನೆಯ ಇನ್ನೊಂದು ಹೆಸರಾಗಿತ್ತು. ವಂಚನೆ ಪ್ರಕರಣಗಳಲ್ಲಿ ಭಾರತೀಯ ದಂಡ ಸಂಹಿತೆಯ 420 ಸೆಕ್ಷನ್ ಬಳಸುತ್ತಿದ್ದುದೇ ಇದಕ್ಕೆ ಕಾರಣ. ಬ್ರಿಟಿಷರ ಕಾಲದ ಭಾರತೀಯ ದಂಡ ಸಂಹಿತೆ ಬದಲಿಸಿ, ಆ ಜಾಗದಲ್ಲಿ ಭಾರತೀಯ ನ್ಯಾಯ ಸಂಹಿತೆ ಜಾರಿಗೆ ತರಲು ಕೇಂದ್ರ ಸರ್ಕಾರ ಮುಂದಾಗಿದೆ. ಇದರೊಂದಿಗೆ 420ರಲ್ಲಿದ್ದ ವಂಚನೆ ಅಂಶ ಈಗ ಸೆಕ್ಷನ್ 316ಕ್ಕೆ ವರ್ಗಾವಣೆಯಾಗಿದೆ. ಇದರರಿಂದಾಗಿ 420 ಎಂಬ ಪದದ ಮೊನಚು ಕಡಿಮೆಯಾಗಿದೆ. ಅದೇ ರೀತಿ ಹತ್ಯೆಗೆ ಸಂಬಂಧಿಸಿದ 302 ಸೆಕ್ಷನ್ ಅನ್ನು ಪ್ರಸ್ತಾಪಿತ ಶಾಸನದಲ್ಲಿ 101ನೇ ಸೆಕ್ಷನ್‌ಗೆ ಸೇರ್ಪಡೆ ಮಾಡಲಾಗಿದೆ. ನಿಷೇಧಾಜ್ಞೆಗೆ ಸಂಬಂಧಿಸಿದ ಸೆಕ್ಷನ್ 144 ಅನ್ನು ಸೆಕ್ಷನ್ 187 ಅಡಿ ತರಲಾಗಿದೆ. ಭಾರತೀಯ ದಂಡ ಸಂಹಿತೆಯಲ್ಲಿ 511 ಸೆಕ್ಷನ್‌ಗಳಿವೆ. ಭಾರತೀಯ ನ್ಯಾಯ ಸಂಹಿತೆ 356 ಸೆಕ್ಷನ್ ಹೊಂದಿದೆ. ಎಂಟು ಹೊಸ ಸೆಕ್ಷನ್‌ಗಳನ್ನು ಸೇರಿಸಿ 22 ಅನ್ನು ವಾಪಸ್ ಪಡೆಯಲಾಗಿದೆ.

## ಏಳು ಮಸೂದೆಗಳಿಗೆ ರಾಷ್ಟ್ರಪತಿ ಸಮ್ಮತಿ

ನವದೆಹಲಿ, ಆ. 12 – ಜನ ವಿಶ್ವಾಸ್ ಹಾಗೂ ಡಿಜಿಟಲ್ ಮಾಹಿತಿ ರಕ್ಷಣೆ ಮಸೂದೆಗಳೂ ಸೇರಿದಂತೆ ಏಳು ಮಸೂದೆಗಳಿಗೆ ರಾಷ್ಟ್ರಪತಿ ಒಪ್ಪಿಗೆ ನೀಡಿದ್ದಾರೆ. ಇದರೊಂದಿಗೆ ಮಸೂದೆಗಳು ಕಾಯ್ದೆಗಳಾಗಿ ಪರಿವರ್ತನೆಯಾಗಿವೆ. ದೆಹಲಿ ಸೇವೆಗಳ ನಿಯಂತ್ರಣ ಮಸೂದೆ, ಜನನ ಹಾಗೂ ಮರಣಗಳ ನೋಂದಣಿ ತಿದ್ದುಪಡಿ ಮಸೂದೆ, ಐ.ಐ.ಎಂ. ತಿದ್ದುಪಡಿ ಮಸೂದೆ, ರಾಷ್ಟ್ರೀಯ ದಂತ ವೈದ್ಯಕೀಯ ಆಯೋಗ ಹಾಗೂ ಕಡಲಾಚೆ ಖನಿಜಗಳ ಕುರಿತ ಮಸೂದೆಗಳಿಗೆ ಒಪ್ಪಿಗೆ ನೀಡಲಾಗಿದೆ.

**ಭದ್ರಾ ಜಲಾಶಯ**

ಇಂದಿನ ಮಟ್ಟ : 167 ಅಡಿ
ಒಳ ಹರಿವು: 2702 ಕ್ಯೂಸೆಕ್ಸ್
ಹೊರ ಹರಿವು : 1718 ಕ್ಯೂಸೆಕ್ಸ್
ಹಿಂದಿನ ವರ್ಷದ್ದು : 184 ಅಡಿ




## ಶಾಮನೂರಿನ ಕುಂದವಾಡದ ಹನುಮಂತಪ್ಪ ನಿಧನ



ದಾವಣಗೆರೆ ಸಿಟಿ ಶಾಮನೂರು ವಾಸಿ

**ಶ್ರೀ ಕುಂದವಾಡದ ಹನುಮಂತಪ್ಪ**

ಅವರು, ದಿನಾಂಕ 12.08.2023ರ ಶನಿವಾರ ರಾತ್ರಿ 9.54ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ 79 ವರ್ಷ ವಯಸ್ಸಾಗಿತ್ತು. ಪತ್ನಿ, ಮೂವರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ ಹಾಗೂ ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 13.08.2023ರ ಭಾನುವಾರ ಮಧ್ಯಾಹ್ನ 1 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**
ಮೊ. 99729-84079, 83101-25359



# ನಿರುದ್ಯೋಗ ಮುಕ್ತಕ್ಕೆ ಮುನ್ನುಡಿ ಸರ್ಕಾರಿ ಕಾಲೇಜಿನಲ್ಲಿ ಬಿಸಿಎಗೆ ಚಾಲನೆ



ರಾಣೇಬೆನ್ನೂರು ಶಾಸಕ ಪ್ರಕಾಶ ಕೋಳಿವಾಡ

ರಾಣೇಬೆನ್ನೂರು, ಆ.12- ಸ್ಪೋಕನ್ ಇಂಗ್ಲಿಷ್, ಕೌಶಲ್ಯ ತರಬೇತಿ ಹಾಗೂ ಕಂಪ್ಯೂಟರ್ ಜ್ಞಾನದ ಕೊರತೆಯಿಂದ ದೇಶದಲ್ಲಿ ನಿರುದ್ಯೋಗ ಸಮಸ್ಯೆ ಹೆಚ್ಚಾಗಿದ್ದು ಪದವಿ ಜೊತೆಗೆ ಈ ಪಾಠಗಳ ಅವಶ್ಯವಿದೆ ಎಂದು ಶಾಸಕ ಪ್ರಕಾಶ ಕೋಳಿವಾಡ ಹೇಳಿದರು.

ಅವರು ಇಲ್ಲಿನ ಸರ್ಕಾರಿ ಕಾಲೇಜಿನಲ್ಲಿ ಬ್ಯಾಚುಲರ್ ಆಫ್ ಕಂಪ್ಯೂಟರ್ ಅಪ್ಲಿಕೇಷನ್ ಕೋರ್ಸ್ ಪ್ರಾರಂಭಿಸಿ ಮಾತನಾಡುತ್ತಿದ್ದರು.

ಕಾಂಗ್ರೆಸ್‌ನ ಐದು ಗ್ಯಾರಂಟಿಗಳ ಜೊತೆ ರಾಣೇಬೆನ್ನೂರು ನಿರುದ್ಯೋಗ ಮುಕ್ತ, ಹಾವೇರಿ ಜಿಲ್ಲೆ ಬರ ಮುಕ್ತದ ಎರಡು ಪ್ರತ್ಯೇಕ ಗ್ಯಾರಂಟಿಗಳನ್ನು ಚುನಾವಣೆ ಸಂದರ್ಭದಲ್ಲಿ ಹೇಳಿದ್ದನ್ನು ನೆನೆಪಿಸಿಕೊಂಡು ಮಾತನಾಡಿದ ಶಾಸಕರು, ಬಿಸಿಎ ಕೋರ್ಸ್ ಮಾಡಲು ಕನಿಷ್ಟ 80 ಸಾವಿರದಷ್ಟು ಹಣದ ಅವಶ್ಯಕತೆ ಇದೆ. ಆದರೆ ಇಲ್ಲಿ 10 ಸಾವಿರ ರೂ. ಖರ್ಚಾಗಲಿದೆ. ಅದು ಸ್ಕಾಲರ್ ಶಿಪ್ ಮೂಲಕ ವಿದ್ಯಾರ್ಥಿಗಳಿಗೆ ಮರಳಿ ಸಿಗಲಿದೆ ಎಂದು ತಿಳಿಸಿದರು.

ಸರ್ಕಾರಿ ಶಾಲೆಗಳಲ್ಲಿ ಬಡವರು, ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಹೆಚ್ಚು ಇದ್ದು, ಅವರು ಸ್ವಾವಲಂಬಿಗಳಾಗಿ ಬದುಕಲು ಉದ್ಯೋಗ ಪೂರಕ ಇಂತಹ ಕೋರ್ಸ್‌ಗಳನ್ನು ಹೆಚ್ಚು ತೆರೆಯಬೇಕಿದೆ. ಅವುಗಳ ಸದುಪಯೋಗ ನಮ್ಮ ವಿದ್ಯಾರ್ಥಿಗಳಿಗೆ ದೊರಕಬೇಕು. ವಿದ್ಯಾರ್ಥಿನಿಯರು ಈ ದಿಶೆ ಯಲ್ಲಿ ಹೆಚ್ಚು ಚಿಂತನೆ ಮಾಡ ಬೇಕು. ಎಲ್ಲ ರೀತಿಯಿಂದಲೂ ಸ್ವಾವಲಂಬಿಗಳಾದರೆ ದೇಶದ ಪ್ರಗತಿ ಸಾಧ್ಯ ಎಂದು ಶಾಸಕ ಪ್ರಕಾಶ್ ಕೋಳಿವಾಡ ಹೇಳಿದರು.

ಕ್ರೀಡಾ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಮುಕ್ತಾಯ ಹಾಗೂ ಅಂತಿಮ ಪದವಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭದಲ್ಲಿ ಹಾವೇರಿ ವಿ.ವಿ.ಯ ಕುಲಸಚಿವೆ ವಿಜಯಲಕ್ಷ್ಮಿ ತಿರ್ಲಾಪೂರ, ಪ್ರಾಂಶುಪಾಲ ಎಸ್ಕೆ ಪಾಟೀಲ್, ಬಿ. ರವಿ, ಅರುಣಕುಮಾರ್, ಚಂದನ, ಡಾ. ರಾಘವೇಂದ್ರ, ಆರ್. ವಿಜಯಲಕ್ಷ್ಮಿ ಮತ್ತಿತರರಿದ್ದರು.

# ದುಶ್ಚಟಗಳಿಂದ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ

## ಕೊಮಾರನಹಳ್ಳಿ : ಮದ್ಯವರ್ಜನೆ ಶಿಬಿರದಲ್ಲಿ ಡಾ. ಲಕ್ಷ್ಮಿದೇವಿ ಎಚ್ಚರಿಕೆ




ಮಲೇಬೆನ್ನೂರು, ಆ.12- ಅತಿಯಾದ ಮದ್ಯ ಹಾಗೂ ತಂಬಾಕು, ಗುಟ್ಕಾ ಸೇವನೆಯಿಂದ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರಲಿದೆ ಎಂದು ಮಲೇಬೆನ್ನೂರು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಲಕ್ಷ್ಮಿದೇವಿ ಹೇಳಿದರು.

ಅವರು ಶನಿವಾರ ಕೊಮಾರನಹಳ್ಳಿ ಗ್ರಾಮದ ಹೆಳವನಕಟ್ಟೆ ಶ್ರೀ ಲಕ್ಷ್ಮಿ ರಂಗನಾಥ ಸ್ವಾಮಿ ದೇವಸ್ಥಾನದ ಸಮುದಾಯ ಭವನದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಹಮ್ಮಿಕೊಂಡಿರುವ 1705ನೇ ಮದ್ಯವರ್ಜನೆ ಶಿಬಿರದ 2ನೇ ದಿನ ಶಿಬಿರಾರ್ಥಿಗಳಿಗೆ ಆರೋಗ್ಯ ತಪಾಸಣೆ ಮಾಡಿ ಮಾತನಾಡಿದರು.

ದುಶ್ಚಟಗಳಿಂದ ಆರೋಗ್ಯ ಹಾಳಾಗುವುದರ ಜೊತೆಗೆ ಕುಟುಂಬದವರು ನಿಮ್ಮ ವರ್ತನೆ ನೋಡಿ ಮನಸ್ಸಿಗೆ ತುಂಬಾ ನೋವು ಮಾಡಿಕೊಳ್ಳುತ್ತಾರೆ. ಅಲ್ಲದೇ, ಸಮಾಜದಲ್ಲಿ ನಿಮ್ಮನ್ನು ಕೀಳಾಗಿ ನೋಡುತ್ತಾರೆ. ಹಾಗಾಗಿ ನೀವು ದುಶ್ಚಟಗಳಿಂದ ಹೊರ ಬರಲು ಇದೊಂದು ಸುವರ್ಣಾವಕಾಶ ಸಿಕ್ಕಿದ್ದು, ಇಲ್ಲಿ ಬಂದಿರುವ ಎಲ್ಲಾ 80 ಶಿಬಿರಾರ್ಥಿಗಳು ಒಂದು ವಾರದಲ್ಲಿ ಮನಸ್ಸನ್ನು ಪರಿವರ್ತನೆ ಮಾಡಿಕೊಂಡು ಇನ್ನೆಂದು ನಾನು ದುಶ್ಚಟಗಳನ್ನು ಮಾಡುವುದಿಲ್ಲ ಎಂಬ ದೃಢ ಸಂಕಲ್ಪದೊಂದಿಗೆ ಹೊಸ ಜೀವನ ಆರಂಭಿಸ ಬೇಕೆಂದು ಡಾ.ಲಕ್ಷ್ಮಿದೇವಿ ಮನವಿ ಮಾಡಿದರು.

ಕುಂಬಳೂರಿನ ಡಾ.ಅವಿನಾಶ್, ಧರ್ಮಸ್ಥಳದ ಆರೋಗ್ಯ ಸಹಾಯಕರಾದ ಪ್ರೆಸಿಲ್ಲಾ ಡಿಸೋಜ ಹಾಗೂ ಆರೋಗ್ಯ ಕೇಂದ್ರದ ಸಿಬ್ಬಂದಿ ಮತ್ತು ಆಶಾ ಕಾರ್ಯಕರ್ತರು, ಶಿಬಿರಾರ್ಥಿಗಳ ರಕ್ತ ಮತ್ತು ಬಿಪಿ ಪರೀಕ್ಷೆ ಮಾಡಿದರು.

ಮದ್ಯವರ್ಜನೆ ಶಿಬಿರದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಜಿ.ಮಂಜುನಾಥ್ ಪಟೇಲ್, ಮಲೇಬೆನ್ನೂರು ಯೋಜನಾಧಿಕಾರಿ ವಸಂತ್ ದೇವಾಡಿಗ, ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯ ಜಿಗಳಿ ಪ್ರಕಾಶ್, ಶಿಬಿರಾಧಿಕಾರಿ ವಿದ್ಯಾಧರ್, ವಲಯ ಮೇಲ್ವಿಚಾರಕರಾದ ರಕ್ಷಿತಾ, ಸಂಪತ್ ಲಕ್ಷ್ಮಿ, ಹರೀಶ್, ಚಂದ್ರಪ್ಪ, ಮಾರುತಿ, ಕೃಷಿ ಮೇಲ್ವಿಚಾರಕ ಗಂಗಾಧರ್, ಗ್ರಾಮದ ಹುಗ್ಗಿ ರಂಗನಾಥ್, ಕೊಕ್ಕನೂರಿನ ಅರ್ಚಕ ಹನುಮಂತ ರಾಯ ಮತ್ತಿತರರು ಈ ವೇಳೆ ಹಾಜರಿದ್ದರು.

## ರಾಣೇಬೆನ್ನೂರಿನಲ್ಲಿ ಶ್ರಾವಣ ಕಾರ್ಯಕ್ರಮ



ರಾಣೇಬೆನ್ನೂರು, ಆ. 12 - ಇಲ್ಲಿನ ಬೀರೇಶ್ವರ ನಗರದ ಶ್ರೀ ವೀರಭದ್ರ ದೇವಸ್ಥಾನಲ್ಲಿ ಇದೇ ದಿನಾಂಕ 17 ರಿಂದ ಶ್ರಾವಣ ಮಾಸದ ವಿಶೇಷ ಪೂಜಾ ಕಾರ್ಯಕ್ರಮಗಳು ನಡೆಯಲಿವೆ.

ಪ್ರತಿದಿನ ಬೆಳಿಗ್ಗೆ ಬ್ರಾಹ್ಮೀ ಮುಹೂರ್ತದಲ್ಲಿ ರುದ್ರಾಭಿಷೇಕ, ವಿಶೇಷ ಅಲಂಕಾರ, ಮಹಾಮಂಗಳಾರತಿ ನಡೆಯಲಿದೆ ಎಂದು ಕಮಿಟಿಯ ಜಿ.ಬಿ. ಮಾಸಣಗಿ ತಿಳಿಸಿದ್ದಾರೆ.

## ಪ್ಲಾಸ್ಟಿಕ್ ಧ್ವಜ ಮಾರಾಟ ಮಾಡದಂತೆ ಮುಂಜಾಗ್ರತೆ ಕ್ರಮವಹಿಸಲು ಮನವಿ



ಹರಪನಹಳ್ಳಿ

ಹರಪನಹಳ್ಳಿ, ಆ. 12- ಸ್ವಾತಂತ್ರ್ಯ ದಿನಾಚರಣೆ ಸಂದರ್ಭದಲ್ಲಿ ರಾಷ್ಟ್ರಧ್ವಜಕ್ಕೆ ಅಪಮಾನವಾಗದಂತೆ ಹಾಗೂ ಸರ್ಕಾರ ನಿಷೇಧಿಸಿರುವ ಪ್ಲಾಸ್ಟಿಕ್ ಧ್ವಜಗಳನ್ನು ಮಾರಾಟ ಮಾಡದಂತೆ ತಡೆಗಟ್ಟಲು ಮುಂಜಾಗ್ರತೆವಾಗಿ ಕ್ರಮವಹಿಸಬೇಕೆಂದು ಹಿಂದೂ ಜನಜಾಗೃತಿ ಸಮಿತಿ ಪದಾಧಿಕಾರಿಗಳು ತಹಶೀಲ್ದಾರ್‌ರವರಿಗೆ ಮನವಿ ಸಲ್ಲಿಸಿದ್ದಾರೆ.

ಈ ವೇಳೆ ಹಿಂದೂ ಜನಜಾಗೃತಿ ಸಮಿತಿ ಮುಖಂಡ ಶಿವಾನಂದ ಹುಲೇನರ್ ಮಾತನಾಡಿ, ನಮ್ಮ ರಾಷ್ಟ್ರಧ್ವಜವು ರಾಷ್ಟ್ರದ ಭಾವೈಕ್ಯದ ಸಂಕೇತವಾಗಿದೆ. ಆಗಸ್ಟ್ 15 ಮತ್ತು ಜನವರಿ 26 ರಂದು ರಾಷ್ಟ್ರಧ್ವಜವನ್ನು ಹೆಮ್ಮೆಯಿಂದ ಪ್ರದರ್ಶಿಸಿಸಲಾಗುತ್ತದೆ, ಆದರೆ ಅದೇ ದಿನ ಕಾಗದದ/ಪ್ಲಾಸ್ಟಿಕ್‌ನ ಸಣ್ಣ-ಸಣ್ಣ ರಾಷ್ಟ್ರಧ್ವಜಗಳು ರಸ್ತೆಗಳು, ಕಸ ಮತ್ತು ಚರಂಡಿಗಳಲ್ಲಿ ಹರಿದ ಸ್ಥಿತಿಯಲ್ಲಿ ಬಿದ್ದಿರುವುದು ಕಂಡುಬರುತ್ತದೆ, ಪ್ಲಾಸ್ಟಿಕ್ ಧ್ವಜಗಳು ಬೇಗನೇ ನಾಶವಾಗುವುದಿಲ್ಲ, ಆದ್ದರಿಂದ ಅನೇಕ ದಿನಗಳವರೆಗೆ ರಾಷ್ಟ್ರಧ್ವಜಗಳ ಅವಮಾನವನ್ನು ನೋಡಬೇಕಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ಚಿದಾನಂದ, ಮಹಾಂತೇಶ್, ಮೋಹನ್, ಪ್ರವೀಣ್ ಬಣಕಾರ, ನೇತ್ರಕುಮಾರ, ಸತೀಶ್ ಸೇರಿದಂತೆ ಇತರರು ಇದ್ದರು.

## ಕಾಡಜ್ಜಿ ಗ್ರಾ.ಪಂ. ಅಧ್ಯಕ್ಷ ದೇವರಾಜ ನಾಯ್ಕ



ದಾವಣಗೆರೆ, ಆ.12- ತಾಲ್ಲೂಕಿನ ಕಾಡಜ್ಜಿ ಗ್ರಾಮ ಪಂಚಾಯಿತಿಯ ಎರಡನೇ ಅವಧಿಗೆ ಅಧ್ಯಕ್ಷರಾಗಿ ದೇವರಾಜ ನಾಯ್ಕ ಮತ್ತು ಉಪಾಧ್ಯಕ್ಷರಾಗಿ ಗೀತಮ್ಮ ಹನುಮಂತಪ್ಪ ಆಯ್ಕೆಯಾಗಿದ್ದಾರೆ. ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಡಿ.ಎಂ. ಶ್ರೀಧರಮೂರ್ತಿ ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದ್ದರು.

# ರಾಜಕಾರಣ ಕೆಲವರನ್ನು ಆರಿಸಿಕೊಳ್ಳುತ್ತದೆ



ಸಂಸದ ಜಿ.ಎಂ. ಸಿದ್ದೇಶ್ವರ ಅಭಿಮತ

ದಾವಣಗೆರೆ, ಆ.12- ರಾಜಕಾರಣ ಎಲ್ಲರನ್ನೂ ಕೈಬೀಸಿ ಕರೆಯುತ್ತದೆ. ಆದರೆ, ಅದರಲ್ಲಿ ಕೆಲವರನ್ನು ಮಾತ್ರ ಆರಿಸಿಕೊಳ್ಳುತ್ತದೆ ಎಂದು ಲೋಕಸಭಾ ಸದಸ್ಯ ಜಿ.ಎಂ. ಸಿದ್ದೇಶ್ವರ ಅಭಿಪ್ರಾಯಪಟ್ಟರು.

ಅವರು ಶನಿವಾರ ತಮ್ಮ ಕಚೇರಿಯಲ್ಲಿ ಜನ ಸಂಪರ್ಕ ಸಭೆಯಲ್ಲಿ ಸಾರ್ವಜನಿಕರಿಂದ ಮನವಿ ಸ್ವೀಕರಿಸುವ ವೇಳೆ, ದಾವಣಗೆರೆ ತಾಲ್ಲೂಕು ಬೆಳವನೂರು ಗ್ರಾಮ ಪಂಚಾಯತಿಗೆ ಆಯ್ಕೆಯಾದ ನೂತನ ಅಧ್ಯಕ್ಷ ಹಾಗೂ ಉಪಾಧ್ಯಕ್ಷರುಗಳಿಂದ ಅಭಿನಂದನೆ ಸ್ವೀಕರಿಸಿ, ತಾವೂ ಸಹ ಅವರನ್ನು ಸನ್ಮಾನಿಸಿ ಮಾತನಾಡಿದರು.

ರಾಜಕಾರಣವು ತಮ್ಮನ್ನು ಆರಿಸಿಕೊಳ್ಳುವ ಪ್ರಕ್ರಿಯೆಯನ್ನು ಅದೃಷ್ಟ ಎಂದು ಭಾವಿಸದೇ ಅವಕಾಶ ಎಂದು ಭಾವಿಸಿ ಜನರ ಸೇವೆ ಮಾಡಿ ಎಂದು ಸಂಸದರು ಸಲಹೆ ನೀಡಿದರು.

ಸಾಕಷ್ಟು ಅನುದಾನಗಳು ನೇರವಾಗಿ ಗ್ರಾಮ ಪಂಚಾಯತಿಗೆ ಬರುತ್ತವೆ. 15ನೇ ಹಣಕಾಸು ಯೋಜನೆಯಡಿ ಸಾಕಷ್ಟು ಅನುದಾನ ಬರುತ್ತದೆ. ಈ ಅನುದಾನವನ್ನು ಸದ್ಬಳಕೆ ಮಾಡಿಕೊಂಡು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಶಾಶ್ವತ ಕೆಲಸ ಮಾಡಿ ಜನಮಾನಸದಲ್ಲಿ ಉಳಿಯಿರಿ ಎಂದು ಕಿವಿಮಾತು ಹೇಳಿದರು.

ಗ್ರಾಮ ಪಂಚಾಯತಿಯಲ್ಲಿ ಉತ್ತಮ ಅನುಭವ ಪಡೆದರೆ ಮುಂಬರುವ ರಾಜಕೀಯ ಪ್ರಯಾಣ ಸುಲಭವಾಗಲಿದೆ ಈ ನಿಟ್ಟಿನಲ್ಲಿ ನಿಮ್ಮ ಗಮನ ಇರಲಿ ಎಂದರು.

ಗ್ರಾಮ ಪಂಚಾಯತಿಯಲ್ಲಿ ಕೆಲಸ ಮಾಡುವ ಪಿಡಿಓ ಹಾಗೂ ಕಾರ್ಯದರ್ಶಿಗಳ ಮೇಲೆ ಸಾಕಷ್ಟು ಸದಸ್ಯರುಗಳು ಆರೋಪ ಮಾಡುತ್ತಾರೆ. ಆದರೆ, ಅವರಿಂದ ಯಾವ ರೀತಿ ಕೆಲಸ ತೆಗೆದುಕೊಳ್ಳಬೇಕು ಎನ್ನುವುದನ್ನು ನೀವು ಹೋಂ ವರ್ಕ್ ಮಾಡಬೇಕಾಗುತ್ತದೆ. ನಮ್ಮ ಜಿಲ್ಲೆಯಲ್ಲಿ ಸುಮಾರು ಏಳೆಂಟು ಗ್ರಾಮ ಪಂಚಾಯತಿಗಳಲ್ಲಿ ಅಧ್ಯಕ್ಷ-ಸದಸ್ಯರುಗಳ ಹಾಗೂ ಪಿ.ಡಿ.ಓ. ಗಳ ಸಮನ್ವಯತೆಯಿಂದ ಮಾದರಿ ಎನ್ನಬಹುದಾದ ಕಾಮಗಾರಿಗಳು ನಡೆದಿವೆ. ಇದು ನನ್ನ ಗಮನಕ್ಕೆ ಬಂದಿದೆ. ಈ ರೀತಿ ಅನುದಾನವನ್ನು ಸದ್ಬಳಕೆ ಮಾಡಿಕೊಂಡು ಇತರರಿಗೆ ಮಾದರಿಯಾದರೆ ನಮಗೂ ಕೂಡ ತೃಪ್ತಿಯಾಗುತ್ತದೆ ಎಂದರು.

ಚನ್ನಗಿರಿ ತಾಲ್ಲೂಕಿನ ಬುಳ್ಳಸಾಗರ ಗ್ರಾಮ ಪಂಚಾಯತಿ ಅಕ್ಕಳಿಕಟ್ಟೆ ಗ್ರಾಮದವರು ಗ್ರಾಮಕ್ಕೆ ಸೇರಿದ ಗೋಮಾಳವನ್ನು ಗ್ರಾಮಕ್ಕೆ ಅನುಕೂಲವಾಗುವ ಕಾರ್ಯಕ್ಕೆ ಮಾತ್ರ ಬಳಕೆ ಮಾಡಿಕೊಳ್ಳುವಂತೆ ಹಿರಿಯ ಅಧಿಕಾರಿಗಳಿಗೆ ನಿರ್ದೇಶನ ನೀಡುವಂತೆ ಮನವಿ ಸಲ್ಲಿಸಿದರು. ಮುಗಳಿಹಳ್ಳಿ ಗ್ರಾಮದವರು ಗ್ರಾಮದಲ್ಲಿ ಬಿ.ಎಸ್.ಎನ್.ಎಲ್. ಟವರ್ ಅಳವಡಿಸಿಕೊಡುವಂತೆ ಕೋರಿಕೊಂಡರು. ಜಗಳೂರು ತಾಲ್ಲೂಕು ಚಿಕ್ಕಬಂಟನಹಳ್ಳಿ ಹಾಗೂ ಹರಿಹರ ತಾಲ್ಲೂಕು ಎಳೆಹೊಳೆ ಗ್ರಾಮದವರು ದೇವಸ್ಥಾನ ನಿರ್ಮಾಣದ ವಿಷಯವಾಗಿ ಮನವಿ ಸಲ್ಲಿಸಿದಾಗ ಇದನ್ನು ಮುಜರಾಯಿ ಇಲಾಖೆಗೆ ಶಿಫಾರಸ್ಸು ಮಾಡುವುದಾಗಿ ಸಂಸದರು ಹೇಳಿದರು.

ಹರಪನಹಳ್ಳಿ ತಾಲ್ಲೂಕು ನಂದಿಬೇವೂರು, ವಡ್ಡಿನ ದಾದಾಪುರ ತಾಂಡಾ, ಗಡಿಗುಡಾಳು ಗ್ರಾಮಸ್ಥರು ವಿವಿಧ ಕೆಲಸಗಳಿಗಾಗಿ ಮನವಿ ಸಲ್ಲಿಸಿದರು.

ಮಾಜಿ ಶಾಸಕ ಎಸ್.ವಿ.ರಾಮಚಂದ್ರಪ್ಪ, ತುರ್ಚಘಟ್ಟ ಗ್ರಾಮದ ಕರಿಬಸಪ್ಪ, ಪ್ರಭಣ್ಣ, ಆರನೇಕಲ್ ವಿಜಯ್‌ಕುಮಾರ್ ಸೇರಿದಂತೆ ಅನೇಕರು ಜನಸಂಪರ್ಕ ಸಭೆಯಲ್ಲಿ ಭಾಗವಹಿಸಿದ್ದರು.

## ಹೊಳೆಸಿರಿಗೆರೆಗೆ ಇಂದು ಸಚಿವರಾದ ಕೆ.ಎನ್. ರಾಜಣ್ಣ, ಎಸ್ಸೆಸ್ಸೆಂ

ಮಲೇಬೆನ್ನೂರು ಸಮೀಪದ ಹೊಳೆಸಿರಿಗೆರೆ ಗ್ರಾಮದ ವಿವಿಧೋದ್ದೇಶ ಪ್ರಾಥಮಿಕ ಕೃಷಿ ಗ್ರಾಮೀಣ ಸಹಕಾರ ಸಂಘದ ವತಿಯಿಂದ ನಿರ್ಮಿಸಿರುವ ಉಗ್ರಾಣದ ಉದ್ಘಾಟನೆ ಮತ್ತು ಭದ್ರಾ ಪ್ರಾಥಮಿಕ ಕೃಷಿ ಗ್ರಾಮೀಣ ಸಹಕಾರ ಸಂಘದ ವತಿಯಿಂದ ನಿರ್ಮಿಸಿರುವ ಉಗ್ರಾಣ ಹಾಗೂ ವೇಬ್ರಿಡ್ಜ್ ಉದ್ಘಾಟನಾ ಸಮಾರಂಭವನ್ನು ಇಂದು ಮಧ್ಯಾಹ್ನ 1 ಕ್ಕೆ ಕಲ್ಲೇಶ್ವರ ಸಮುದಾಯ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಸಿಇಓಗಳಾದ ಎಂ. ಮಲ್ಲೇಶಪ್ಪ, ಎಂ. ಬಸವರಾಜ್ ತಿಳಿಸಿದ್ದಾರೆ.

ಅಧ್ಯಕ್ಷತೆ : ಡಿ.ಸಿ.ಸಿ. ಬ್ಯಾಂಕ್ ಅಧ್ಯಕ್ಷ ಬಿ. ಹಾಲೇಶಪ್ಪ. ಉಗ್ರಾಣಗಳ ಉದ್ಘಾಟನೆ : ಸಹಕಾರ ಸಚಿವ ಕೆ.ಎನ್. ರಾಜಣ್ಣ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಸಂಸದ ಜಿ.ಎಂ. ಸಿದ್ದೇಶ್ವರ. ವೇಬ್ರಿಡ್ಜ್ ಉದ್ಘಾಟನೆ : ಶಾಸಕ ಬಿ.ಪಿ. ಹರೀಶ್. ಸನ್ಮಾನ : ಸಂಘದ ಸಂಸ್ಥಾಪಕ ಕಾರ್ಯದರ್ಶಿ ಕೆ. ಮಲ್ಲೇಶಪ್ಪ.

ಮುಖ್ಯ ಅತಿಥಿಗಳು : ಶಾಮನೂರು ಶಿವಶಂಕರಪ್ಪ, ಡಿ.ಜಿ. ಶಾಂತನಗೌಡ್ರು, ಕೆ.ಎಸ್. ನವೀನ್, ಎನ್.ಜಿ. ನಾಗನಗೌಡ್ರು, ಎಂ.ಜಿ. ಪರಮೇಶ್ವರಗೌಡ, ಜೆ.ಆರ್. ಷಣ್ಮುಖಪ್ಪ, ಬಿ. ಶೇಖರಪ್ಪ, ಜಗದೀಶಪ್ಪ ಬಣಕಾರ್, ಜೆ.ಎಸ್. ವೇಣುಗೋಪಾಲರೆಡ್ಡಿ, ಕೆಂಗಲಹಳ್ಳಿ ಷಣ್ಮುಖಪ್ಪ ಮತ್ತಿತರರು.

## ಅತ್ತಿಗೆರೆ ಗ್ರಾ.ಪಂ.ಗೆ ಕೆ.ಓ ಮಹೇಶ್ ಅಧ್ಯಕ್ಷ



ದಾವಣಗೆರೆ, ಆ.12- ತಾಲ್ಲೂಕಿನ ಅತ್ತಿಗೆರೆ ಗ್ರಾಮ ಪಂಚಾಯಿತಿಯ ಎರಡನೇ ಅವಧಿಗೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಮಹೇಶ್ ಕೆ.ಓ. ಕಳವೂರು ಆಯ್ಕೆಯಾಗಿದ್ದಾರೆ. 20 ಸದಸ್ಯರಲ್ಲಿ 14 ಮತಗಳನ್ನು ಮಹೇಶ್ ಪಡೆದಿದ್ದಾರೆ. ಉಪಾಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದ್ದ ಏಕೈಕ ಅಭ್ಯರ್ಥಿ ಲತಾ ಮಂಜುನಾಥ್ ಜಿ.ಸಿ. ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

## ಗುಡಾಳ್ ಪಂಚಾಯಿತಿಗೆ ಬಿ.ಲೋಕೇಶ್ ಅಧ್ಯಕ್ಷ




ದಾವಣಗೆರೆ, ಆ.12- ತಾಲ್ಲೂಕಿನ ಗುಡಾಳು ಗ್ರಾಮ ಪಂಚಾಯಿತಿಗೆ ಕಳೆದ 8ರಂದು ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಬಿ. ಲೋಕೇಶ್ ಮತ್ತು ಉಪಾಧ್ಯಕ್ಷರಾಗಿ ಹನುಮಕ್ಕ ನಾಗಪ್ಪ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಉತ್ತರ ವಲಯ ಕೇತ್ರ ಶಿಕ್ಷಣಾಧಿಕಾರಿ ಟಿ.ಅಂಬಣ್ಣ ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದ್ದರು. ಪಂಚಾಯತ್ ಅಭಿವೃದ್ಧಿ ಅಧಿಕಾರಿ ಸಿ.ರಾಘವೇಂದ್ರ ನಾಯ್ಕ್ ಹಾಗು ಕಾರ್ಯದರ್ಶಿ ಯು.ಗಂಗಪ್ಪ ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದರು.

# ನಗರದಲ್ಲಿ ನಾಳೆ 'ಸಾಮೂಹಿಕ ಬರಿ ಹೊಟ್ಟೆ ಸತ್ಯಾಗ್ರಹ'

ದಾವಣಗೆರೆ, ಆ. 12- ಭೂಮಿ ಮತ್ತು ವಸತಿ ಹಕ್ಕು ವಂಚಿತರ ಹೋರಾಟ ಸಮಿತಿ ವತಿಯಿಂದ ಬದುಕಿನ ಸ್ವಾತಂತ್ರ್ಯಕ್ಕಾಗಿ ಭೂಮಿ, ವಸತಿ, ನಿವೇಶನ ವಂಚಿತ ಬಡ ಜನರಿಂದ ನಾಡಿದ್ದು ದಿನಾಂಕ 14 ಮತ್ತು 15 ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಸಾಮೂಹಿಕ ಬರಿ ಹೊಟ್ಟೆ ಸತ್ಯಾಗ್ರಹ ಹಮ್ಮಿಕೊಳ್ಳಲಾಗಿದೆ ಎಂದು ಸಂಘಟನೆ ರಾಜ್ಯ ಸಂಚಾಲಕ ಕುಮಾರ್ ಸಮತಳ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್ ಸರ್ಕಾರ ಐದು ಗ್ಯಾರಂಟಿಗಳ ಸಂದರ್ಭದಲ್ಲಿಯೇ ಸರ್ಕಾರದ ಸೌಲಭ್ಯಗಳನ್ನು ಆಧರಿಸುವ ಬದಲು, ಸ್ವಾವಲಂಬಿ ಬದುಕಿನ ಗ್ಯಾರಂಟಿ ನೀಡಬೇಕೆಂದು ಸಮಿತಿ ಆಗ್ರಹಿಸುತ್ತದೆ ಎಂದರು.

ಮುಖ್ಯಮಂತ್ರಿ ನೇತೃತ್ವದಲ್ಲಿ ಕಂದಾಯ, ಅರಣ್ಯ, ವಸತಿ ಹಾಗೂ ಗ್ರಾಮೀಣಾಭಿವೃದ್ಧಿ ಸಚಿವರು, ಹೋರಾಟದ ಪ್ರತಿನಿಧಿಗಳು ಇರುವಂತೆ ಶೀಘ್ರವೇ ಉನ್ನತ ಮಟ್ಟದ ಸಭೆ ಕರೆಯಬೇಕು. ನಮ್ಮ ಬೇಡಿಕೆಯನ್ನು ಕಾಲಮಿತಿಯಲ್ಲಿ ಜಾರಿಗೊಳಿಸಲು ಹೈ ಪವರ್ ಕಮಿಟಿ ರಚಿಸಬೇಕು. ಸಮಿತಿಗೆ ಒಬ್ಬರು ಸಂಪುಟ ದರ್ಜೆ ಮಂತ್ರಿಗಳ ನೇತೃತ್ವದಲ್ಲಿ ಕಾರ್ಯನಿರ್ವಹಿಸಬೇಕೆಂದು ಆಗ್ರಹಿಸಲಾಗುವುದು ಎಂದು ತಿಳಿಸಿದರು.

ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲೂ ಭೂ ಮಂಜೂರಾತಿ ಸಮಿತಿಗಳನ್ನು ಕೂಡಲೇ ರಚಿಸಬೇಕು. ಸಮಿತಿಗೆ ನಮ್ಮ ಪ್ರತಿನಿಧಿಗಳನ್ನು ನೇಮಿಸಬೇಕು. ಭೂ ಮಂಜೂರಾತಿ ಪ್ರಕ್ರಿಯೆಯನ್ನು ಸರಳ ಹಾಗೂ ತ್ವರಿತಗತಿಯಲ್ಲಿ ಹಾಗೂ ಭೂಮಿಗೆ ತಕ್ಷಣ ಹಕ್ಕುಪತ್ರ ನೀಡಬೇಕೆಂದು ಆಗ್ರಹಿಸಲಾಗುವುದು ಎಂದು ಹೇಳಿದರು.

ರೈತರು, ಹೋರಾಟಗಾರರ ಮೇಲೆ ಅರಣ್ಯ ಇಲಾಖೆ, ಪೊಲೀಸರು ದಾಖಲಿಸಿರುವ ಕೇಸುಗಳನ್ನು ವಾಪಾಸ್ ಪಡೆಯಬೇಕು. ಯಾವುದೇ ಸರ್ಕಾರಿ, ಅರಣ್ಯ ಭೂಮಿಯಲ್ಲಿ ಐದು ಎಕರೆಗಿಂತ ಕಡಿಮೆ ಸಾಗುವಳಿ ಇಲ್ಲದೇ ಒತ್ತುವರಿ ಮಾಡಿಕೊಂಡಿರುವ ಯಾವುದೇ ಅರ್ಜಿದಾರರು ನಮಗೆ ಪರ್ಯಾಯ ಒದಗಿಸದೇ ತೆರವುಗೊಳಿಸಬಾರದು ಎಂದು ಒತ್ತಾಯಿಸಲಾಗುವುದು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಸತೀಶ ಅರವಿಂದ್, ಜಯ್ಯಣ್ಣ, ಹನುಮಂತಪ್ಪ, ವೆಂಕಟೇಶ್, ಪವಿತ್ರ ಉಪಸ್ಥಿತರಿದ್ದರು.

## ಬಸಾಪುರದ ಬಾತಿ ಪರಮೇಶ್ವರಪ್ಪ ನಿಧನ



ದಾವಣಗೆರೆ ತಾಲ್ಲೂಕು ಬಸಾಪುರ ಗ್ರಾಮದ ವಾಸಿ ಬಾತಿ ಪರಮೇಶ್ವರಪ್ಪ (58) ಇವರು, ದಿನಾಂಕ 12.8.2023ರ ಶನಿವಾರ ಸಂಜೆ 6.30 ಕ್ಕೆ ನಿಧನರಾದರು. ಪತ್ನಿ, ಮೂವರು ಪುತ್ರರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 13.8.2023ರ ಭಾನುವಾರ ಮಧ್ಯಾಹ್ನ 12.30ಕ್ಕೆ ಮೃತರ ಸ್ವಗ್ರಾಮವಾದ ದಾವಣಗೆರೆ ತಾಲ್ಲೂಕು ಬಸಾಪುರ ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಲಿದೆ.

# ಆರೋಗ್ಯದಿಂದ ದೇಶದ ಆರ್ಥಿಕತೆ

**(1ನೇ ಪುಟದಿಂದ)** ಸಮಸ್ಯೆ ಇರುವವರಿಗೆ ಕಿಡ್ನಿ ಸಮಸ್ಯೆ ಬರುವ ಸಾಧ್ಯತೆ ಹೆಚ್ಚಾಗಿರುತ್ತದೆ. ಇವರಿಗೆ ಕಾಯಿಲೆ ಬಂದ ಆರಂಭದಲ್ಲೇ ಮುನ್ನೆಚ್ಚರಿಕೆ ಬಗ್ಗೆ ತಿಳಿಸಿದ್ದರೆ ಅವರು ಆರೋಗ್ಯವಂತರಾಗಿ ದೇಶಕ್ಕೆ ಕೊಡುಗೆ ನೀಡಲು ಸಾಧ್ಯವಾಗುತ್ತಿತ್ತು ಎಂದು ಜಿಲ್ಲಾಧಿಕಾರಿ ಹೇಳಿದರು.

ಭಾರತವು ಈಗ ವಿಶ್ವದ ಮುಂಚೂಣಿ ದೇಶಗಳಲ್ಲಿ ಒಂದಾಗಿದೆ. ಆದರೆ, ಭಾರತದ ಜೊತೆಗೇ ಸ್ವಾತಂತ್ರ್ಯ ಪಡೆದುಕೊಂಡ ಪಾಕಿಸ್ತಾನ, ಆಫ್ಘಾನಿಸ್ತಾನ, ಮ್ಯಾನ್‌ಮಾರ್ ಮುಂದಾದ ದೇಶಗಳು ಸಂಕಷ್ಟದಲ್ಲಿವೆ. ಭಾರತ ಪ್ರಗತಿ ಕಾಣಲು ಯುವ ಪೀಳಿಗೆಯಲ್ಲಿ ವಿಜ್ಞಾನ ಹಾಗೂ ತಂತ್ರಜ್ಞಾನದ ಆಸಕ್ತಿ ಬಿತ್ತಿದ್ದೇ ಕಾರಣ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಜೆ.ಜೆ.ಎಂ.ಎಂ.ಸಿ. ಪ್ರಾಂಶುಪಾಲ ಡಾ. ಎಸ್.ಬಿ. ಮುರುಗೇಶ್, ನಗರೀಕರಣದಿಂದಾಗಿ ನಾವು ಗ್ರಾಮ ಹಾಗೂ ದೇಸಿ ಆಟಗಳ ಸೊಗಡನ್ನು ಕಳೆದುಕೊಳ್ಳುತ್ತಿದ್ದೇವೆ. ಗ್ರಾಮೀಣ ಕ್ರೀಡೆಗಳೂ ಮಾನಸಿಕ ಹಾಗೂ ದೈಹಿಕ ಆರೋಗ್ಯ ವೃದ್ಧಿಗೆ ನೆರವಾಗುತ್ತವೆ. ಇಂತಹ ಕ್ರೀಡೆಗಳ ಕಡೆ ಒಲವು ಹೆಚ್ಚಿಸಿಕೊಳ್ಳಬೇಕು ಎಂದು ಹೇಳಿದರು.

ಕಾರ್ಯಕ್ರಮದ ವೇದಿಕೆಯ ಮೇಲೆ ಕಾಲೇಜಿನ ಉಪನ್ಯಾಸಕರಾದ ಡಾ. ಎಸ್. ಅಶ್ವಿನಿ, ಡಾ. ಎಂ.ಎಸ್. ಅನುರೂಪ, ಡಾ. ನೀತ, ಕೆ.ಎನ್. ಗೋಪಾಲಕೃಷ್ಣ, ವಿದ್ಯಾರ್ಥಿ ಸಂಘದ ಪದಾಧಿಕಾರಿಗಳಾದ ವಿ. ಸಾತ್ವಿಕ್ ಅರಸ್, ಸೃಷ್ಟಿ ಗುಪ್ತ, ಶ್ರೇಯ ಕಟ್ಟಿ, ಸ್ಫೂರ್ತಿ, ಗಗನದೀಪ ಭಂಡಾರ್ಕರ್ ಮತ್ತಿತರರು ಉಪಸ್ಥಿತರಿದ್ದರು. ಗಾಯತ್ರಿ ಪ್ರಾರ್ಥಿಸಿದರೆ, ಶ್ರೀಕಾಂತ್ ನಿರೂಪಿಸಿದರು.

# ಮಾರುಕಟ್ಟೆ ಕೇಳಿದ ನೇಪಾಳ

**(1ನೇ ಪುಟದಿಂದ)**ಭಾರತಕ್ಕೆ ಸುಲಭ ಮಾರುಕಟ್ಟೆ ಮಾರ್ಗ ಕಲ್ಪಿಸಿದರೆ ಹೆಚ್ಚಿನ ಪ್ರಮಾಣದ ಟೊಮ್ಯಾಟೋ ಪೂರೈಕೆ ಸಾಧ್ಯವಾಗಲಿದೆ. ನೇಪಾಳದ ಟೊಮ್ಯಾಟೋಗಳಿಗೆ ಭಾರತ ಉತ್ತಮ ಮಾರುಕಟ್ಟೆಯಾಗಿದೆ ಎಂದು ಕಾಳಿಮತಿ ಹಣ್ಣು ಹಾಗೂ ತರಕಾರಿ ಮಾರುಕಟ್ಟೆ ಮಂಡಳಿಯ ಉಪ ನಿರ್ದೇಶಕ ಬಿನಯ್ ಶ್ರೇಷ್ಠ ಹೇಳಿದ್ದಾರೆ.

ಪ್ರಸಕ್ತ ಕಠ್ಮಂಡುವಿನಲ್ಲಿ ಬೆಳೆಯುವ ಟೊಮ್ಯಾಟೋ ಅನ್ನು ಭಾರತಕ್ಕೆ ಅನಧಿಕೃತ ಮಾರ್ಗಗಳ ಮೂಲಕ ರವಾನಿಸಲಾಗುತ್ತಿದೆ. ನೇಪಾಳದ ಕಠ್ಮಂಡು, ಲಲಿತ್‌ಪುರ ಹಾಗೂ ಭಕ್ತಪುರಗಳಲ್ಲಿ ಟೊಮ್ಯಾಟೋ ಹೆಚ್ಚಾಗಿ ಬೆಳೆಯಲಾಗುತ್ತಿದೆ. ಒಂದೂವರೆ ತಿಂಗಳ ಹಿಂದೆ ಟೊಮ್ಯಾಟೋ ಬೆಲೆ ತೀವ್ರ ಕುಸಿತವಾಗಿ ಇಲ್ಲಿನ ರೈತರು ಸಂಕಷ್ಟಕ್ಕೆ ಸಿಲುಕಿದ್ದರು.

ನಂತರದಲ್ಲಿ ವರ್ತಕರು ಅಕ್ರಮವಾಗಿ ಭಾರತಕ್ಕೆ ಟೊಮ್ಯಾಟೋ ರಫ್ತು ಮಾಡಲು ಆರಂಭಿಸಿದರು. ಇದರಿಂದಾಗಿ ಟೊಮ್ಯಾಟೋ ಬೆಲೆ ನಾಲ್ಕು ಪಟ್ಟು ಹೆಚ್ಚಾಯಿತಲ್ಲದೇ, ಕೊರತೆಯು ಉಂಟಾಯಿತು.

ಚಿಲ್ಲರೆ ಮಾರುಕಟ್ಟೆಯಲ್ಲಿ ಕೆಜಿಗೆ 40-50 ರೂ. ಇದ್ದ ಟೊಮ್ಯಾಟೋ ಬೆಲೆ 250 ರೂ.ಗಳವರೆಗೆ ಹೆಚ್ಚಾಯಿತು ಎಂದು ಶ್ರೇಷ್ಠ ಹೇಳಿದ್ದಾರೆ. ಅನಧಿಕೃತವಾಗಿ ನೇಪಾಳದಿಂದ ಭಾರತಕ್ಕೆ 40 ಸಾವಿರ ಕೆಜಿಗೆ ಟೊಮ್ಯಾಟೋ ರಫ್ತು ಮಾಡಲಾಗಿದೆ ಎಂದು ಹೇಳಲಾಗುತ್ತಿದೆ.

## ಭಾನುವಳ್ಳಿ: ಒಣಗಿದ ಮೆಕ್ಕೆಜೋಳ




ಹರಿಹರ, ಆ.12- ತಾಲ್ಲೂಕಿನ ಭಾನುವಳ್ಳಿ ಗ್ರಾಮದಲ್ಲಿ ಮೆಕ್ಕೆಜೋಳ ಬಿತ್ತನೆ ಮಾಡಿದ್ದು, ಅತಿವೃಷ್ಟಿಯಿಂದ ಹಾಗೂ ನಂತರ ಮಳೆ ಕೈ ಕೊಟ್ಟ ಕಾರಣದಿಂದ ರೈತರು ಕಂಗಾಲಾಗಿದ್ದಾರೆ. ಸುಮಾರು ಒಂದೂವರೆ ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಒಣಗಿದೆ ಎಂದು ಭಾನುವಳ್ಳಿ ರೈತ ಸಂಘದ ಅಧ್ಯಕ್ಷ ಪ್ರಕಾಶ್ ತಿಳಿಸಿದರು. ಈ ಸಂದರ್ಭದಲ್ಲಿ ಬಾಬುಗೌಡ ಪಾಟೀಲ್ ಎನ್, ನಾಗರಾಜ್ ಬಿ.ಜಿ. ಬಸವರಾಜ, ಸಿದ್ದಪ್ಪ ಡಿ.ಜಿ. ಬಸವರಾಜ್, ಶಿವ, ಗಾಣಿಗೇರ ಚಂದ್ರಪ್ಪ ಇತರರು ಉಪಸ್ಥಿತರಿದ್ದರು.

## ಕಕ್ಕರಗೊಳ್ಳ ಗ್ರಾ. ಪಂ.ಗೆ ಕೊಟ್ರಮ್ಮ ಅಧ್ಯಕ್ಷೆ



ದಾವಣಗೆರೆ, ಆ.12- ತಾಲ್ಲೂಕಿನ ಕಕ್ಕರಗೊಳ್ಳ ಗ್ರಾಮ ಪಂಚಾಯಿತಿಗೆ ಕಳೆದ ಆ.11ರಂದು ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಕೊಟ್ರಮ್ಮ ವೀರೇಶ್ ಪಿ.ಕೋಡಿಹಳ್ಳಿ ಮತ್ತು ಉಪಾಧ್ಯಕ್ಷರಾಗಿ ಗುತ್ಯಪ್ಪ ಸಿರಿಗೆರೆ ಇವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಡಿ.ಎಂ. ಶ್ರೀಧರಮೂರ್ತಿ ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದ್ದರು.

## ಚಿರಸ್ಮರಣೆ



ದಿ|| ನೀಲಗುಂದ ಸಿದ್ದರಾಮಣ್ಣ
ಜನನ : 1904, ಲಿಂಗೈಕ್ಯ : 1979 (ದಿ. 13.08.79) 45ನೇ ವರ್ಷ

ದಿ|| ಚನ್ನಮ್ಮ ಸಿದ್ಧರಾಮಣ್ಣ ನೀಲಗುಂದ
ಜನನ : 1914, ಲಿಂಗೈಕ್ಯ : 1998 (ದಿ. 31.07.98) 26ನೇ ವರ್ಷ

ನಿಮ್ಮ ನೆನಪೇ ಚೈತನ್ಯದಾಯಕ. ತಾವು ಹಾಕಿಕೊಟ್ಟ ದಾರಿಯಲ್ಲೇ ಮುನ್ನಡೆಯುತ್ತಿರುವ...

**ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ನೀಲಗುಂದ ಬಂಧುಗಳು.**

## ಹರಿಹರ ತಾ.ಪ್ರೌ.ಶಾ ಮುಖ್ಯೋಪಾಧ್ಯಾಯರ, ಉಪ ಪ್ರಾಚಾರ್ಯರ ಸಂಘಕ್ಕೆ ಆಯ್ಕೆ



ಹರಿಹರ, ಆ. 12- ಹರಿಹರ ತಾಲ್ಲೂಕು ಪ್ರೌಢಶಾಲಾ ಮುಖ್ಯೋಪಾಧ್ಯಾಯರು ಮತ್ತು ಉಪಪ್ರಾಚಾರ್ಯರ ಸಂಘದ ನೂತನ ಅಧ್ಯಕ್ಷರಾಗಿ ಬಿಳಸನೂರು ಸರ್ಕಾರಿ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಕೆ.ಆರ್.ವಿಶ್ವನಾಥ, ಉಪಾಧ್ಯಕ್ಷರಾಗಿ ಸರ್ಕಾರಿ ಪ್ರೌಢಶಾಲೆ ಹಾಲಿವಾಣದ ಮುಖ್ಯ ಶಿಕ್ಷಕ ಹನುಮಂತಪ್ಪ, ಪ್ರಧಾನ ಕಾರ್ಯದರ್ಶಿಯಾಗಿ ಮಲೇಬೆನ್ನೂರಿನ ಜಾಮಿಯಾ ನ್ಯಾಷನಲ್ ಪ್ರೌಢಶಾಲೆ ಮುಖ್ಯ ಶಿಕ್ಷಕ ಕೆ.ಆರ್. ಮಹಮ್ಮದ್ ಇಲಿಯಾಜ್, ಖಜಾಂಚಿಯಾಗಿ ಕುಂಬಳೂರಿನ ಶರಣ ಸಂಗಮ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಬಸವರಾಜ ಗುಂಡಣ್ಣನವರ ಆಯ್ಕೆಯಾಗಿದ್ದಾರೆ.

ನಗರದ ಗುರುಭವನದಲ್ಲಿ ನಡೆದ ಈ ಪದಾಧಿಕಾರಿಗಳ ಆಯ್ಕೆ ಸಭೆಯಲ್ಲಿ ನಿಕಟಪೂರ್ವ ಅಧ್ಯಕ್ಷ ಸಿ. ಜಯಣ್ಣ, ಉಪಾಧ್ಯಕ್ಷ ಕೆ.ಜಿ. ಬಸವನಗೌಡ, ಕಾರ್ಯದರ್ಶಿ ಸಿದ್ದರಾಮೇಶ್, ಖಜಾಂಚಿ ಬಿ.ಬಿ. ರೇವಣನಾಯ್ಕ್, ಧೂಳೆಹೊಳೆ ಶಾಲೆ ಮುಖ್ಯ ಶಿಕ್ಷಕ ಡಿ.ಎಂ. ಮಂಜುನಾಥಯ್ಯ ಇತರರು ಹಾಜರಿದ್ದರು.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ವಾರ ಭವಿಷ್ಯ

**ದಿನಾಂಕ : 13.08.2023 ರಿಂದ 19.08.2023**

**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ಯಾವುದೇ ವ್ಯವಹಾರದಲ್ಲಿ ಹೂಡಿಕೆ ಮಾಡುವ ಮೊದಲು ಹಣಕಾಸು ತಜ್ಞರ ಸಲಹೆ ಪಡೆದು ಮುಂದುವರೆಯುವುದು ಉತ್ತಮ. ಬಹುಕಾಲಿಕ ಯೋಜನೆಯಾಗಿದ್ದಲ್ಲಿ ಬಂಡವಾಳದ ಮೂಲವನ್ನು ಹೊಂದಿಸಿಕೊಳ್ಳಿ. ಭಾವುಕತೆ ಅತಿಯಾದಲ್ಲಿ ಹಲವರಲ್ಲಿ ಅಥವಾ ಬಂಧುಗಳಲ್ಲಿ ಗೊಂದಲವನ್ನುಂಟು ಮಾಡಲಿದೆ. ಮಕ್ಕಳ ನಡಾವಳಿಯಲ್ಲಿ ಕಂಡುಬರಲಿರುವ ವ್ಯತ್ಯಾಸ ಕುಟುಂಬದ ಹಿರಿಯರಿಗೆ ತಲೆನೋವನ್ನು ಉಂಟುಮಾಡುವುದು. ವೈಯಕ್ತಿಕ ಬದುಕಿನಲ್ಲಿ ಬದಲಾವಣೆ ಕಂಡುಬರಲಿದೆ. ಸೋಮ-ಮಂಗಳ-ಗುರು-ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ವಹಿಸಿಕೊಂಡ ಜವಾಬ್ದಾರಿಯನ್ನು ಪೂರೈಸಿದ ಸಂತೃಪ್ತಿ ನಿಮ್ಮದಾಗಲಿದೆ. ಮತ್ತೊಬ್ಬರಿಗೆ ಕೊಟ್ಟ ಹಣ ಮರಳಿ ಕೈ ಸೇರಲಿದೆ. ನಿರುದ್ಯೋಗಿ ಮಗನಿಗೆ ನೌಕರಿ ದೊರೆತು ಮನಸ್ಸಿಗೆ ನೆಮ್ಮದಿಯಾಗುವುದು. ವ್ಯಾಪಾರಿಗಳಿಗೆ ತೈಲ ಕ್ಷೇತ್ರದಲ್ಲಿ ಹೆಚ್ಚಿನ ಲಾಭವಾಗಲಿದೆ. ಅವಿವಾಹಿತರಿಗೆ ಕಂಕಣಭಾಗ್ಯ ಕೂಡಿ ಬರಲಿದೆ. ಅನಾವಶ್ಯಕ ಖರ್ಚಿಗೊಂದು ಕಡಿವಾಣ ಹಾಕದೇ ಹೋದಲ್ಲಿ ಆರ್ಥಿಕ ವ್ಯವಸ್ಥೆಯಲ್ಲಿ ವ್ಯತ್ಯಾಸವಾಗಲಿದೆ. ವಿದ್ಯಾರ್ಥಿಗಳು ಅಧ್ಯಯನದಲ್ಲಿ ಹೆಚ್ಚಿನ ಗಮನಹರಿಸುವುದು ಮೇಲು. ಗುರು-ಶುಕ್ರ-ಶನಿ-ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಔ, ಚ.ಕೆ.ಕೋ.ಹ.)**

ಆತ್ಮೀಯರ ಅಗಲಿಕೆ ಅನಿವಾರ್ಯವಾಗಲಿದೆ. ಸಹನೆಯಿಂದ ವರ್ತಿಸಿ. ಬೆಂಕಿ ಅಥವಾ ವಿದ್ಯುತ್ ಉಪಕರಣಗಳ ರಿಪೇರಿ ಮಾಡುವವರು ತುಸು ಎಚ್ಚರಿಕೆಯಿಂದ ಕೆಲಸ ಮಾಡುವುದು ಮೇಲು. ಹಿರಿಯರ ಆರೋಗ್ಯದಲ್ಲಿ ಸಾಕಷ್ಟು ಸುಧಾರಣೆಯಾಗಲಿದೆ. ಆಸ್ತಿ ಖರೀದಿ ವಿಚಾರದಲ್ಲಿ ಅವಸರ ಬೇಡ, ಆದಾಯದಲ್ಲಿ ಹೆಚ್ಚಳ, ಹಣಕಾಸಿನ ಪರಿಸ್ಥಿತಿ ತಕ್ಕಮಟ್ಟಿಗೆ ಸುಧಾರಿಸಲಿದೆ.ಕರಕುಶಲ ಉದ್ಯಮದಲ್ಲಿ ವಹಿವಾಟು ಹೆಚ್ಚಲಿದೆ. ತರಕಾರಿ, ಹೂವು, ಹಣ್ಣು ಹಾಗೂ ಹೈನುಗಾರಿಕೆಯಲ್ಲಿ ಹೆಚ್ಚಿನ ಲಾಭವಾಗಲಿದೆ. ಗುರುಗಳ ಸೇವೆ ಮಾಡಿ. ಭಾನು-ಮಂಗಳ-ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೊ.ಡ.ಡಿ.ಡು.ಡೆ.ಡೋ)**

ಯಾವುದೇ ವಿಷಯದಲ್ಲಾಗಲೀ ಅತಿಯಾದ ನಿರೀಕ್ಷೆ ಮಾಡುವುದು ಅಷ್ಟು ಒಳ್ಳೆಯದಲ್ಲ. ಇತಿಮಿತಿ ಮೀರಿದಲ್ಲಿ ನಿರಾಸೆಯುಂಟಾಗಬಹುದು. ರಾಜಕಾರಣಿಗಳು ಬರೀ ರಾಜಕೀಯದಲ್ಲಿ ಮುಳುಗದೆ ಕೌಟುಂಬಿಕ ವಿಚಾರಗಳತ್ತ ತುಸು ಗಮನಹರಿಸದೇ ಹೋದಲ್ಲಿ ಸಂಸಾರದಲ್ಲಿ ಅಸಮಾಧಾನ ಮೂಡಬಹುದು. ಅಮೂಲ್ಯವಾದ ವಸ್ತುವನ್ನು ಎಲ್ಲೋ ಇಟ್ಟು ಮತ್ತೆಲ್ಲೋ ಹುಡುಕುವ ಪ್ರಸಂಗ ಬರಬಹುದು. ನಿರ್ಮಾಣದ ಹಂತದಲ್ಲಿರುವ ಮನೆ ಕೆಲಸ ಮುಂದುವರೆಯಲಿದೆ. ವಿದ್ಯಾರ್ಥಿಗಳಿಗೆ ಮಧ್ಯಮ ಫಲಿತಾಂಶ ಬರಲಿದೆ. ಸೋಮ-ಗುರು-ಶುಕ್ರ-ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ಮಹಿಳಾ ನೌಕರರಿಗೆ ಹೆಚ್ಚಿನ ಜವಾಬ್ದಾರಿ ಬರಲಿದೆ. ಅದನ್ನು ವಹಿಸಿಕೊಳ್ಳುವ ಮುನ್ನ ಸಾಧಕ-ಬಾಧಕಗಳ ಬಗ್ಗೆ ಚಿಂತಿಸಿ, ಹಣಕಾಸು ಸಂಸ್ಥೆಯಲ್ಲಿ ನೌಕರಿ ಪಡೆಯಲು ಹರ ಸಾಹಸ ಮಾಡುವುದಕ್ಕಿಂತ ಪ್ರಭಾವಿ ವ್ಯಕ್ತಿಗಳ ನೆರವು ಪಡೆಯುವುದು ಉತ್ತಮ. ಹಿಡಿದ ಕಾರ್ಯವನ್ನು ಮಾಡಿ ಮುಗಿಸುವ ಛಲ ಯುವ ಜನರಲ್ಲಿ ಮೂಡಲಿದೆ. ವ್ಯವಹಾರದಲ್ಲಿ ನಿಮ್ಮ ಶತ್ರುಗಳು ಬಲಹೀನರಾಗಿ ನಿಮ್ಮೊಂದಿಗೆ ಸ್ನೇಹ ಹಸ್ತವನ್ನು ಚಾಚುವರು. ಮಕ್ಕಳ ವಿದ್ಯಾಭ್ಯಾಸದಲ್ಲಿ ಹೆಚ್ಚಿನ ಪ್ರಗತಿ ಕಂಡುಬರಲಿದೆ. ಅನಾವಶ್ಯಕ ಪ್ರಯಾಣವನ್ನು ಮಾಡದಿರಿ. ಭಾನು-ಸೋಮ-ಗುರು-ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ಹಿತಶತ್ರುಗಳು ನಿಮ್ಮನ್ನು ವಂಚಿಸಲು ಸ್ನೇಹವನ್ನು ಬೆಳೆಸಲು ಯತ್ನಿಸುವರು. ಇಂತಹವರ ಜೊತೆ ಎಚ್ಚರದಿಂದಿರಿ, ಗೊತ್ತಿಲ್ಲದ ವಿಷಯಗಳನ್ನು ತಿಳಿದವರ ಮುಂದೆ ಹೇಳಿದಲ್ಲಿ ಸಮಸ್ಯೆಗೊಂದು ಪರಿಹಾರ ದೊರೆಯಬಹುದು. ಹೊಸ ಗೆಳೆಯರ ಪರಿಚಯದಿಂದಾಗಿ ನಿಮ್ಮ ವ್ಯವಹಾರಕ್ಕೊಂದು ಹೆಚ್ಚಿನ ಬೆಂಬಲ ದೊರೆಯಲಿದೆ. ನಿವೃತ್ತಿ ಹಂಚಿನಲ್ಲಿರುವವರು ತಮ್ಮಗಳಿಕೆಯನ್ನು ಹೂಡಿಕೆ ಮಾಡುವ ಮೊದಲು ಹಲವು ಬಾರಿ ಯೋಚಿಸುದು ಉತ್ತಮ. ವಂಚಕರ ವಿಚಾರದಲ್ಲಿ ಸಾಕಷ್ಟು ಎಚ್ಚರದಿಂದಿರಿ. ಮಂಗಳ-ಬುಧ-ಗುರು-ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ಕಾರ್ಪೊರೇಟ್ ಮಟ್ಟದ ಕಂಪನಿಗಳಲ್ಲಿರುವ ಲೆಕ್ಕಪರಿಶೋಧಕರು ತುಸು ಎಚ್ಚರದಿಂದ ಕರ್ತವ್ಯವನ್ನು ನಿರ್ವಹಿಸದೇ ಹೋದಲ್ಲಿ ಕಷ್ಟಗಳ ಸರಮಾಲೆ ಎದುರಾಗಬಹುದು. ಪೂರ್ವ ಸಿದ್ಧತೆಯೊಂದಿಗೆ ಆರಂಭಿಸಿದ ಕೆಲಸವು ಫಲಪ್ರದವಾಗಲಿದೆ. ಹಣಕಾಸಿನ ಕೊರತೆಯಿಲ್ಲದಿದ್ದರೂ ದುಂದು ವೆಚ್ಚಕ್ಕೊಂದು ಕಡಿವಾಣ ಹಾಕುವುದು ಮೇಲು. ಕೃಷಿಕರಿಗೆ ಅದರಲ್ಲೂ ವಾಣಿಜ್ಯ ಬೆಳೆಗಾರರಿಗೆ ಹೆಚ್ಚಿನ ಲಾಭವಾಗಲಿದೆ. ಕುಶಲ ಕರ್ಮಿಗಳಿಗೆ ದೇಶ-ವಿದೇಶಗಳಲ್ಲಿ ಬೇಡಿಕೆ ಹೆಚ್ಚಲಿದೆ. ವಿದೇಶದಲ್ಲಿರುವ ಮಗನಿಂದ ಆರ್ಥಿಕ ನೆರವು. ಸೋಮ-ಶುಕ್ರ-ಶನಿ-ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**

ಮನೆಯಲ್ಲಿ ನಡೆಯಲಿರುವ ಮಂಗಲ ಕಾರ್ಯಕ್ಕೆ ಭರದ ಸಿದ್ಧತೆ ನಡೆಯಲಿದೆ. ಯುವಕರು ವ್ಯಾಪಾರ, ವ್ಯವಹಾರಗಳಲ್ಲಿ ತೊಡಗಿಕೊಳ್ಳುವ ಮುನ್ನ ಗುರು-ಹಿರಿಯರ ಆಶೀರ್ವಾದ ಪಡೆಯುವುದು ಉತ್ತಮ. ಪಾದರಕ್ಷೆ ಮೊದಲಾದ ಚರ್ಮ ನಿರ್ಮಿತ ವಸ್ತುಗಳಿಗೆ ದೇಶ-ವಿದೇಶದಿಂದ ಹೆಚ್ಚಿನ ಬೇಡಿಕೆ ಬರಲಿದೆ. ಅನಿರೀಕ್ಷಿತವಾಗಿ ಅವಿವಾಹಿತರಿಗೆ ಕಂಕಣ ಭಾಗ್ಯ ಕೂಡಿಬರಲಿದೆ. ವಿದೇಶದಿಂದ ಪರಿವಾರ ಸಮೇತ ಮಗನ ಆಗಮನವಾಗಲಿದೆ. ಅನಾಸಕ್ತರ ವಿಚಾರದ ಬಗ್ಗೆ ಚಿಂತೆಬೇಡ. ಆದಾಯದ ಮೂಲದಲ್ಲಿ ಹೆಚ್ಚಳ ಕಾಣದೇ ಹೋಗಲಿದೆ. ಭಾನು-ಮಂಗಳ-ಶುಕ್ರ-ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಢ, ಉತ್ತರಾಷಾಢ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ವ್ಯಾಪಾರ, ವ್ಯವಹಾರಗಳಲ್ಲಿ ಸಮಯ ಪಾಲನೆ ಮತ್ತು ಸಮಯವನ್ನು ವ್ಯವಸ್ಥಿತ ರೀತಿಯಲ್ಲಿ ವಿನಿಯೋಗಿಸುವುದನ್ನು ಕಲಿಯಿರಿ. ಆರಂಭಿಸಿದ ಉದ್ಯಮದಲ್ಲಿ ಇನ್ನು ಮುಂದೆ ಹೆಚ್ಚಿನ ಲಾಭಾಂಶ ಪಡೆಯುವಿರಿ. ರೈತಾಪಿ ಮಿತ್ರರು ಹೆಚ್ಚಿನ ಭೂಮಿಯನ್ನು ಕೊಳ್ಳುವ ಸಂಭವವಿದೆ. ಮಕ್ಕಳ ಉನ್ನತಾಧ್ಯಯನಕ್ಕೆ ಹೆಚ್ಚಿನ ಪ್ರೋತ್ಸಾಹ ದೊರೆಯಲಿದೆ. ಆದಾಯದಲ್ಲಿ ಹೆಚ್ಚಳ ಕಂಡುಬರಲಿದ್ದು, ಉಳಿತಾಯದ ಬಗ್ಗೆ ಯೋಚಿಸಬಹುದು. ವಿಜ್ಞಾನಿಗಳ ಸಂಶೋಧನೆಯಲ್ಲಿ ಹೆಚ್ಚಿನ ಪ್ರಗತಿ ಕಂಡು ಬರಲಿದೆ. ಹಿರಿಯರ ಆರೋಗ್ಯದಲ್ಲಿ ಸಾಕಷ್ಟು ಸುಧಾರಣೆ. ಬುಧ-ಗುರು-ಶನಿ-ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ಮಡದಿಯ ಆರೋಗ್ಯದಲ್ಲಿ ತುಸು ವ್ಯತ್ಯಾಸ ಕಾಣಲಿದೆ. ಕ್ರೀಡಾಪಟುಗಳಿಗೆ ಹೆಚ್ಚಿನ ಪ್ರೋತ್ಸಾಹ ಸಿಗಲಿದೆ. ವಿದೇಶದಲ್ಲಿ ಬಂಡವಾಳ ಹೂಡುವ ಮೊದಲು ಸಾಕಷ್ಟು ಅನುಭವಿಗಳನ್ನು ಸಂಪರ್ಕಿಸುವುದು ಮೇಲು. ವಾಹನದ ಬಿಡಿಭಾಗಳ ವಹಿವಾಟು ಭರದಿಂದ ಸಾಗಲಿದೆ. ರೈತಾಪಿ ಜನರ ವಾಣಿಜ್ಯ ಬೆಳೆಗಳಿಗೆ ಬೆಂಬಲಿತ ಬೆಲೆ ದೊರತರೂ, ಅದರಲ್ಲಿ ಹೆಚ್ಚಿನ ಭಾಗ ಮಧ್ಯವರ್ತಿಗಳ ಕೈ ಸೇರಬಹುದು.ಮಹಿಳೆಯರು ಕೌಟುಂಬಿಕ ಸಮಸ್ಯೆಗಳನ್ನು ಜಾಣತನದಿಂದ ನಿಭಾಯಿಸುವುದು ಉತ್ತಮ. ಗುರು-ಶುಕ್ರ-ಶನಿ-ಶುಭ ದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ಎಲ್ಲರನ್ನೂ ಸುಲಭವಾಗಿ ನಂಬುವ ನಿಮಗೆ ಕೆಲವೊಮ್ಮೆ ಅವರಿಂದಲೇ ಸಮಸ್ಯೆಗಳು ಎದುರಾಗಬಹುದು. ಮಡದಿ, ಮಕ್ಕಳ ಬಹುದಿನದ ಬೇಡಿಕೆ ಈ ವಾರ ನೆರವೇರಲಿದೆ. ಕಳೆದು ಹೋಗಿದ್ದ ಅಮೂಲ್ಯ ದಾಖಲೆಗಳು ಮರಳಿ ಸಿಗಲಿವೆ. ಸರ್ಕಾರಿ ನೌಕರರಿಗೆ ಕೆಲವೊಮ್ಮೆ ಅವರ ಸಹೋದ್ಯೋಗಿಗಳಿಂದಲೇ ಅವರ ವಿರುದ್ಧ ಸಂಚು ನಡೆಯುವ ಸಾಧ್ಯತೆಯಿದೆ. ನೆರೆಹೊರೆಯವರೊಂದಿಗೆ ಸೌಹಾರ್ದತೆಯಿಂದ ನಡೆದುಕೊಳ್ಳಿ. ಮಡದಿಗೆ ತವರು ಮನೆಯಿಂದ ಸಹಾಯ ದೊರೆಯಲಿದ್ದು, ಅದನ್ನು ಸಂಕೋಚವಿಲ್ಲದೇ ಪಡೆದುಕೊಳ್ಳಿ. ಭಾನು-ಸೋಮ-ಶನಿ-ಶುಭ ದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ರಾಜಕಾರಣಿಗಳಿಗೆ ಪಕ್ಷದಲ್ಲಿದ್ದ ಸ್ಥಾನಮಾನಗಳಿಗೆ ಚ್ಯುತಿ ಉಂಟಾಗಲಿದೆ. ಸಾಧ್ಯವಾದಷ್ಟು ಹಗರಣಗಳಿಂದ ದೂರವಿರುವುದು ಉತ್ತಮ. ಸಂಘ-ಸಂಸ್ಥೆಗಳ ನಿರ್ವಾಹಕರಿಗೆ ಸರ್ಕಾರದಿಂದ ಬೆಂಬಲ ದೊರೆಯಲಿದೆ. ವೈಯಕ್ತಿಕ ಆರೋಗ್ಯದ ವಿಚಾರದಲ್ಲಿ ಉದಾಸೀನತೆ ಸಲ್ಲದು. ವಿದೇಶದಲ್ಲಿ ಹೂಡಿದ ಬಂಡವಾಳ ಇನ್ನುಮುಂದೆ ಲಾಭವನ್ನು ತರಲಿದೆ. ಆಮದು ಮತ್ತು ರಫ್ತು ವಹಿವಾಟುದಾರರಿಗೆ ಇದ್ದ ಕಾನೂನಿನ ತೊಡಕುಗಳು ಪರಿಹಾರವಾಗಲಿವೆ. ಅಪರಿಚಿತರೊಂದಿಗೆ ಹಣಕಾಸಿನ ವ್ಯವಹಾರ ಬೇಡ. ಗುರು ಚರಿತ್ರೆ ಪಾರಾಯಣ ಮಾಡಿ.ಬುಧ-ಗುರು-ಶನಿ-ಶುಭ ದಿನಗಳು.

**ವಿಶೇಷ ದಿನಗಳು : ದಿನಾಂಕ: 16.8.2023 ನೇ ಬುಧವಾರ ಅಮಾವಾಸ್ಯೆ ಅಧಿಕಮಾಸ ಸಮಾಪ್ತಿ.**

**ದಿನಾಂಕ: 17.8.2023 ನೇ ಗುರುವಾರ ನಿಜ ಶ್ರಾವಣ ಮಾಸ ಆರಂಭ.**

# ಹಣ ಗಳಿಕೆಗಾಗಿ ಆರೋಗ್ಯ ನಿರ್ಲಕ್ಷ್ಯ ಸಲ್ಲದು : ರಂಭಾಪುರಿ ಶ್ರೀ




ದಾವಣಗೆರೆ, ಆ.12- ಮನುಷ್ಯ ಯಾವಾಗಲೂ ಸುಖಾಪೇಕ್ಷಿ. ಸುಖದ ಮೂಲ ಧರ್ಮಾಚರಣೆಯಲ್ಲಿದೆ. ಆಹಾರ, ಆರೋಗ್ಯ ಮತ್ತು ಅಧ್ಯಾತ್ಮ ಮಾನವನ ಸುಖ ಜೀವನಕ್ಕೆ ಮುಖ್ಯವೆಂದು ಶ್ರೀ ರಂಭಾಪುರಿ ಡಾ.ವೀರ ಸೋಮೇಶ್ವರ ಜಗದ್ಗುರುಗಳು ಪ್ರತಿಪಾದಿಸಿದರು.

ನಗರದ ಶ್ರೀ ರಂಭಾಪುರಿ ಜಗದ್ಗುರು ವೀರಗಂಗಾಧರ ಮಂಗಲ ಭವನದಲ್ಲಿ ಜರುಗಿದ ಅಧಿಕ ಶ್ರಾವಣ ಮಾಸದ ಇಷ್ಟಲಿಂಗ ಮಹಾಪೂಜೆ ಹಾಗೂ ಜನ ಜಾಗೃತಿ ಧರ್ಮ ಸಮಾವೇಶದ 4ನೇ ದಿನವಾದ ಇಂದಿನ ಕಾರ್ಯಕ್ರಮದಲ್ಲಿ ದಿವ್ಯ ಸಾನ್ನಿಧ್ಯ ವಹಿಸಿ ಜಗದ್ಗುರುಗಳು ಆಶೀರ್ವಚನ ನೀಡಿದರು.

ಮನುಷ್ಯನಿಗೆ ಸಂಪತ್ತು ಗಳಿಸಲು, ಉಳಿಸಲು ಬೇಕಾದಷ್ಟು ಸಮಯವಿದೆ. ಆದರೆ ಆಧ್ಯಾತ್ಮ ಸಾಧನೆಗೆ ಮತ್ತು ಭಗವಂತನ ಸ್ಮರಣೆಗೆ ಸಮಯ ಇಲ್ಲದಂತಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಮನುಷ್ಯ ಯಾವಾಗಲೂ ಆದರ್ಶವಾಗಿ ಬದುಕಬೇಕಾದರೆ ತಿನ್ನುವ ಅನ್ನದಲ್ಲಿ ಆರೋಗ್ಯ ಅಡಗಿದೆ. ಹಣ ಗಳಿಕೆಗಾಗಿ ಆರೋಗ್ಯ ನಿರ್ಲಕ್ಷಿಸುತ್ತಾನೆ. ಆದರೆ ಕಳೆದುಹೋದ ಆರೋಗ್ಯ ಮತ್ತೆಂದೂ ಬಾರದು. ಶಾಂತಿ, ನೆಮ್ಮದಿಯ ಬದುಕಿಗೆ ಅಧ್ಯಾತ್ಮ ಜ್ಞಾನ ಅವಶ್ಯಕವಾಗಿದೆ ಎಂದು ಶ್ರೀ ಜಗದ್ಗುರು ರೇಣುಕಾಚಾರ್ಯರು ಸಿದ್ಧಾಂತ ಶಿಖಾಮಣಿ ಧರ್ಮ ಗ್ರಂಥದಲ್ಲಿ ನಿರೂಪಿಸಿದ್ದಾರೆ ಎಂದು ಹೇಳಿದರು.

ಸಾಮಾಜಿಕ ಸಂಪ್ರದಾಯಗಳು ಬದಲಾಗಬಹುದು. ಆದರೆ ನೈತಿಕ ನಿಯಮಗಳು ಶಾಶ್ವತವಾಗಿರುತ್ತವೆ. ಬಿತ್ತಿದ ಬೀಜದಂತೆ ಫಸಲು. ಹಾಗೆಯೇ ನಮ್ಮ ಆಚರಣೆಯಂತೆ ಫಲ ಪ್ರಾಪ್ತಿಯಾಗುತ್ತದೆ. ಜೀವನ ಮೌಲ್ಯಗಳು ಅಂತ್ಯಗೊಂಡರೆ ಅದರೊಂದಿಗೆ ಮಾನವತೆಯೂ ಅಂತ್ಯಗೊಳ್ಳುತ್ತದೆ ಎಂಬುದನ್ನು ನೆನಪಿಡಬೇಕಾಗುತ್ತದೆ ಎಂದು ಹೇಳಿದರು.

ಮಳಲಿ ಮಠದ ಡಾ.ನಾಗಭೂಷಣ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಭೂಮಿಯ ವ್ಯಾಸ ಇದ್ದಷ್ಟೇ ಇದೆ. ಆದರೆ ಮನುಷ್ಯನ ಹವ್ಯಾಸಗಳು ಹೆಚ್ಚು ಬೆಳೆಯುತ್ತಿವೆ. ಬುದ್ಧಿ ವಿಕಾಸಗೊಂಡಷ್ಟು ಭಾವನೆಗಳು ವಿಕಾಸಗೊಳ್ಳದಿರುವುದೇ ಇಂದಿನ ಎಲ್ಲ ಸಂಘರ್ಷಗಳಿಗೆ ಕಾರಣವಾಗಿದೆ ಎಂದರು.

ಕಾರ್ಯಕ್ರಮದ ನೇತೃತ್ವ ವಹಿಸಿದ ಸೂಡಿ ಜುಕ್ತಿ ಹಿರೇಮಠದ ಡಾ.ಕೊಟ್ಟೂರು ಬಸವೇಶ್ವರ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಉನ್ನತ ಗುರಿ ಮತ್ತು ಗುರುವಿನಿಂದ ಜೀವನದಲ್ಲಿ ಶ್ರೇಯಸ್ಸು ಕಾಣಲು ಸಾಧ್ಯ ಎಂದರು. ಚನ್ನಗಿರಿ ಹಿರೇಮಠದ ಶ್ರೀ ಕೇದಾರ ಶಿವಶಾಂತವೀರ ಶಿವಾಚಾರ್ಯರು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಡಾ. ಮಲ್ಲಿಕಾರ್ಜುನ ವಿ.ಜೆ. ಇವರಿಗೆ 'ವೈದ್ಯ ರತ್ನಾಕರ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಡಾ. ಮಲ್ಲಿಕಾರ್ಜುನ್, ಪ್ರಶಸ್ತಿಯು ಜವಾಬ್ದಾರಿ ಹೆಚ್ಚಿಸುತ್ತದೆ. ಅಲ್ಲದೇ ಹೆಚ್ಚಿನ ಸೇವೆಗೆ ಹುಮ್ಮಸ್ಸು ನೀಡುತ್ತದೆ ಎಂದರು.

ಆರೋಗ್ಯವೇ ಭಾಗ್ಯ. ಒಮ್ಮೆ ಆರೋಗ್ಯ ಕಳೆದುಕೊಂಡರೆ ಮತ್ತೆ ಸಿಗವುದಿಲ್ಲ. ಈ ಹಿನ್ನೆಲೆಯಲ್ಲಿ ಎಲ್ಲರೂ ನಿಯಮಿತ ಆಹಾರ ಅಭ್ಯಾಸ, ನಿತ್ಯ ವ್ಯಾಯಾಮ ಮಾಡುವ ಅಭ್ಯಾಸ ಮೈಗೂಡಿಸಿಕೊಳ್ಳ ಬೇಕು ಎಂದು ಸಲಹೆ ನೀಡಿದರು.

ವಿಧಾನಪರಿಷತ್ ಮಾಜಿ ಮುಖ್ಯ ಸಚೇತಕ ಡಾ.ಎ.ಹೆಚ್. ಶಿವಯೋಗಿಸ್ವಾಮಿ ಮಾತನಾಡಿ, ಭಾರತೀಯರು ವಸುದೈವ ಕುಟುಂಬಕಂ ಕಲ್ಪನೆಯಲ್ಲಿ ಜೀವಿಸುತ್ತಾರೆ. 'ವಿಶ್ವವೇ ಒಂದು ಮನೆಯಾದರೆ ಭಾರತ ದೇವರ ಮನೆ ಇದ್ದಂತೆ' ಎಂದು ವಿದೇಶಿ ಚಿಂತಕರೊಬ್ಬರು ಹೇಳಿದ್ದರು. ಆದರೆ ಇಂದಿನ ಯುವ ಪೀಳಿಗೆ ಆ ದೇವರ ಮನೆಯ ಗೌರವ ಉಳಿಸಿಕೊಂಡು ಬರುತ್ತಿದ್ದಾರೆಯೇ ? ಎಂದು ಚಿಂತಿಸಬೇಕಿದೆ ಎಂದರು.

ಇಂಗ್ಲೆಂಡ್ ದೇಶದವರಿಗೆ ವ್ಯಾಪಾರ, ಫ್ರಾನ್ಸ್‌ನವರಿಗೆ ರಾಜಕಾರಣ, ಜಪಾನ್ ದೇಶದವರಿಗೆ ಲಲಿತಲಾ ಉಪಾಸನೆ ಮಹತ್ವದ್ದಾದರೆ ಭಾರತೀಯರಿಗೆ ಅಧ್ಯಾತ್ಮ ಬಹು ಮುಖ್ಯ. ಆದರೆ ಯುವ ಪೀಳಿಗೆ ಅಧ್ಯಾತ್ಮದಿಂದ ದೂರ ಸರಿಯಲು ಕಾರಣ ಇಂದಿನ ಶಿಕ್ಷಣ ಪದ್ಧತಿ ಎಂದು ಹೇಳಿದರು.

ಹಿರಿಯರ ಜೀವನ, ಸಂಪ್ರದಾಯ, ಆಚಾರ-ವಿಚಾರಗಳ ಬಗ್ಗೆ ಕೀಳರಿಮೆ ಹುಟ್ಟಿಸುವಂತಹ ಪಾಶ್ಚಾತ್ಯ ಶಿಕ್ಷಣವನ್ನು ಇಂದಿನ ಮಕ್ಕಳಿಗೆ ನೀಡಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಪ್ರಧಾನಿ ಅವರು ಶಿಕ್ಷಣದಲ್ಲಿ ಆಮೂಲಾಗ್ರ ಬದಲಾವಣೆಯ ಅಗತ್ಯ ಅರಿತು ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆ ತಂದಿದ್ದಾರೆ ಎಂದರು.

ಎ.ಪಿ.ಎಂ.ಸಿ. ಮಾಜಿ ಅಧ್ಯಕ್ಷ ಎನ್. ಜಿ.ಪುಟ್ಟಸ್ವಾಮಿ, ಸಮಾರಂಭವು ಮೈಸೂರು ಅರಮನೆ ಉತ್ಸವವನ್ನು ನೆನಪಿಸುತ್ತಿದೆ. ದೇವರ ಮನೆ ಶಿವಕುಮಾರ್ ನೇತೃತ್ವದಲ್ಲಿ ಕಾರ್ಯಕ್ರಮ ಅಚ್ಚುಕಟ್ಟಾಗಿ ನಡೆಯುತ್ತಿದೆ ಎಂದು ಶ್ಲಾಘಿಸಿದರು.

ವೀರಶೈವ ಕ್ರೆಡಿಟ್ ಕೋ.ಆಪ್ ಸೊಸೈಟಿ ಅಧ್ಯಕ್ಷ ಅಜ್ಜಂಪುರ ಶೆಟ್ರು ಮೃತ್ಯುಂಜಯ, ಉದ್ಯಮಿ ಬಸವರಾಜಪ್ಪ, ವಿಶ್ವಕರ್ಮ ಕೋ - ಆಪ್. ಸೊಸೈಟಿ ಅಧ್ಯಕ್ಷ ಬಿ.ವಿ. ಶಿವಾನಂದ, ವರ್ತಕ ಎಸ್.ಹೆಚ್. ಚಂದ್ರಶೇಖರಯ್ಯ, ಬಿ.ಎಸ್. ವೀರೇಶ್, ವೇ.ಮಹಾರುದ್ರಯ್ಯ, ಎನ್.ಎಂ. ತಿಪ್ಪೇಸ್ವಾಮಿ, ಪಾಲಿಕೆ ಗುತ್ತಿಗೆದಾರ ಟಿ.ರಮೇಶ್ ಇತರರು ಗುರು ರಕ್ಷೆ ಪಡೆದರು.

ಶ್ರೀ ಜಗದ್ಗುರು ರೇಣುಕಾಚಾರ್ಯ ಗುರುಕುಲದ ಸಾಧಕರಿಂದ ವೇದಘೋಷ, ಹರಿಹರದ ಕಾಂತರಾಜ ಮತ್ತು ವೀರೇಶ ಬಡಿಗೇರ ಇವರಿಂದ ಸಂಗೀತ ಜರುಗಿತು. ಕೊ.ರುದ್ರಯ್ಯ ಶ್ರೀ ರಂಭಾಪುರಿ ಜಗದ್ಗುರುಗಳಿಗೆ ಗೌರವ ಮಾಲಾರ್ಪಣೆ ಸಲ್ಲಿಸಿದರು. ಕೆ.ಬಿ.ನಾಗರಾಜ್ ಸ್ವಾಗತಿಸಿದರು. ಶಿವಯೋಗಿ ನಿರೂಪಿಸಿದರು.

# ನಗರದಲ್ಲಿ ಇಂದು ರಂಭಾಪುರಿ ಶ್ರೀಗಳಿಂದ ಪೂಜೆ, ಜನ ಜಾಗೃತಿ ಧರ್ಮ ಸಮಾವೇಶ



**ಜಿ.ಎಸ್. ಅನಿತ್ ಕುಮಾರ್ ಅವರಿಗೆ 'ಶಿಕ್ಷಣ ಸೇವಾ ಧುರೀಣ' ಬಿರುದು ಪ್ರದಾನ**

ಶ್ರೀ ಅಭಿನವ ರೇಣುಕ ಮಂದಿರದಲ್ಲಿ ನಡೆಯುತ್ತಿರುವ ರಂಭಾಪುರಿ ಪೀಠದ ಶ್ರೀಮದ್ ರಂಭಾಪುರಿ ಜಗದ್ಗುರುಗಳವರ 25ನೇ ವರ್ಷದ ಆಷಾಢ ಮಾಸದ ಇಷ್ಟಲಿಂಗ ಮಹಾಪೂಜೆ ಹಾಗೂ ಧರ್ಮೋತ್ತೇಜಕ ಕಾರ್ಯಕ್ರಮದಲ್ಲಿ ಇಂದಿನ ಸಮಾರಂಭದ ವಿವರ.

ಇಂದು ಸಂಜೆ 6.30ಕ್ಕೆ ಏರ್ಪಾಡಾಗಿರುವ ಧರ್ಮೋತ್ತೇಜಕ ಸಮಾರಂಭದ ನೇತೃತ್ವವನ್ನು ಶ್ರೀ ರೇವಣಸಿದ್ದೇಶ್ವರ ಶಿವಾಚಾರ್ಯ ಸ್ವಾಮಿಗಳು (ಅರಳೆಲೆ ಹಿರೇಮಠ - ಬಂಕಾಪುರ) ವಹಿಸುವರು. ಡಾ. ಶ್ರೀ ನಾಲ್ವಡಿ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿ (ಗವಿಮಠ-ಕಣ್ವಕುಪ್ಪಿ) ಉಪದೇಶಾಮೃತ ನೀಡುವರು.

ಇದೇ ಸಂದರ್ಭದಲ್ಲಿ ಶ್ರೀಶೈಲ ಎಜುಕೇಷನ್ ಟ್ರಸ್ಟ್‌ನ ನಿರ್ದೇಶಕ ಜಿ.ಎಸ್. ಅನಿತ್ ಕುಮಾರ್ ಅವರಿಗೆ 'ಶಿಕ್ಷಣ ಸೇವಾ ಧುರೀಣ' ಬಿರುದಿನೊಂದಿಗೆ ಗೌರವ ಶ್ರೀರಕ್ಷೆ, ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಜಿಲ್ಲಾ ಶ್ರೀ ಮದ್ವೀರಶೈವ ಸದ್ಬೋಧನಾ ಸಂಸ್ಥೆ ಅಧ್ಯಕ್ಷ ದೇವರಮನೆ ಶಿವಕುಮಾರ್, ಶ್ರೀ ಜಗದ್ಗುರು ರೇಣುಕ ಸಾಂಸ್ಕೃತಿಕ ಸಂಘದ ಅಧ್ಯಕ್ಷ ದೇವರಮನೆ ಶಿವರಾಜ್ ತಿಳಿಸಿದ್ದಾರೆ.

ಕೈಗಾರಿಕೋದ್ಯಮಿ ಎಸ್.ಎಸ್. ಗಣೇಶ್, ಜಿಲ್ಲಾ ಬಿಜೆಪಿ ಅಧ್ಯಕ್ಷ ವೀರೇಶ್ ಹನಗವಾಡಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ. ಮಂಜಪ್ಪ, ಜಿಲ್ಲಾ ಜೆಡಿಎಸ್ ಅಧ್ಯಕ್ಷ ಬಿ. ಚಿದಾನಂದಪ್ಪ, ಕಾಂಗ್ರೆಸ್ ಮುಖಂಡ ಎಂ.ಟಿ. ಸುಭಾಷ್‌ಚಂದ್ರ, ಅ.ಭಾ.ವೀ. ಮಹಾಸಭಾ ದಾವಣಗೆರೆ ಘಟಕದ ಅಧ್ಯಕ್ಷ ಜಿ. ಶಿವಯೋಗಪ್ಪ ಅವರುಗಳು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.

# ಭದ್ರಾ ನಾಲಾಗೆ ನೀರಿನ ಕ್ರಮ ; ಲಿಂಗರಾಜ್ ಸ್ವಾಗತ

ದಾವಣಗೆರೆ, ಆ. 10 - ಭದ್ರಾ ನಾಲೆಗೆ ನೀರು ಹರಿಸಬೇಕೆಂಬ ರೈತರ ಒತ್ತಾಯಕ್ಕೆ ಸಮ್ಮತಿಸಿ ಕ್ರಮ ತೆಗೆದುಕೊಂಡಿರುವ ಜಲ ಸಂಪನ್ಮೂಲ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಹಾಗೂ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಮಲ್ಲಿಕಾರ್ಜುನ ಗುಂಗೆ ಅವರಿಗೆ ರೈತರ ಪರವಾಗಿ ಧನ್ಯವಾದ ಸಲ್ಲಿಸುವುದಾಗಿ ಭಾರತೀಯ ರೈತ ಒಕ್ಕೂಟದ ಅಧ್ಯಕ್ಷ ಹೆಚ್.ಆರ್. ಶಾಮನೂರು ಲಿಂಗರಾಜ್ ಹೇಳಿದ್ದಾರೆ.

# ದೀರ್ಘ ಕೋವಿಡ್ ರೋಗಿಯಲ್ಲಿ ನೀಲಿ ಕಾಲಿನ ಸಮಸ್ಯೆ

ನವದೆಹಲಿ, ಆ. 12 - ದೀರ್ಘ ಕೋವಿಡ್‌ನಿಂದ ಬಳಲುತ್ತಿದ್ದ ವ್ಯಕ್ತಿಯಲ್ಲಿ ನೀಲಿ ಕಾಲಿನ ವಿಚಿತ್ರ ಸಮಸ್ಯೆ ಕಂಡು ಬಂದಿದೆ ಎಂದು ದಿ ಲ್ಯಾನ್ಸೆಟ್ ನಿಯತಕಾಲಿಕದಲ್ಲಿ ಪ್ರಕಟಿಸಲಾಗಿದೆ. 33 ವರ್ಷದ ವ್ಯಕ್ತಿಯಲ್ಲಿ ಅಕ್ರೊಕಾನೊಸಿಸ್ ಎಂಬ ಸಮಸ್ಯೆ ಕಂಡು ಬಂದಿದೆ. ಕಾಲುಗಳ ನರಗಳಲ್ಲಿ ರಕ್ತ ಸೇರಿಕೊಳ್ಳುವುದಕ್ಕೆ ಈ ಹೆಸರಿದೆ.

ಕೆಲ ನಿಮಿಷಗಳ ಕಾಲ ನಿಂತ ನಂತರ ವ್ಯಕ್ತಿಯ ಕಾಲು ಕೆಂಪಾಗುತ್ತದೆ. ನಂತರ ನೀಲಿಗಟ್ಟುತ್ತಿದೆ ಎಂದು ಬ್ರಿಟನ್‌ನ ಯೂನಿವರ್ಸಿಟಿ ಆಫ್ ಲೀಡ್ಸ್ ಅಧ್ಯಯನದಲ್ಲಿ ತಿಳಿಸಲಾಗಿದೆ.

ಹತ್ತು ನಿಮಿಷಗಳ ಕಾಲ ನಿಂತ ನಂತರ ಕಾಲಿನ ಬಣ್ಣ ಬದಲಾಗುವುದು ಕಂಡು ಬರುತ್ತಿದೆ. ಈ ಸಮಯದಲ್ಲಿ ಕಾಲಿನಲ್ಲಿ ತೀವ್ರ ತುರಿಕೆ ಕಂಡು ಬರುತ್ತಿದೆ. ಆದರೆ, ಕುಳಿತ ಎರಡೇ ನಿಮಿಷಗಳಲ್ಲಿ ಕಾಲಿನ ಬಣ್ಣ ಸಾಮಾನ್ಯವಾಗುತ್ತಿದೆ. ಕೊರೊನಾ ಸೋಂಕಿತರಲ್ಲಿ ಈ ರೀತಿಯ ಸಮಸ್ಯೆ ಕಂಡು ಬಂದಿರುವುದು ಇದೇ ಮೊದಲು ಎಂದು ವಿಶ್ವವಿದ್ಯಾನಿಲಯದ ಉಪನ್ಯಾಸಕ ಮನೋಜ್ ಶಿವನ್ ತಿಳಿಸಿದ್ದಾರೆ.

# ನಮ್ಮ ಸಚಿವರು ಲಂಚ ಕೇಳಿಲ್ಲ

**ಬಿಜೆಪಿ ಪ್ರಾಯೋಜಿತ ಗುತ್ತಿಗೆದಾರರಿಂದ ಆರೋಪ : ಡಿಕೆಶಿ**



ಬೆಂಗಳೂರು, ಆ. 12 - ನಮ್ಮ ಸರ್ಕಾರದ ಸಚಿವರು, ಶಾಸಕರು ಲಂಚ ಕೇಳಿಲ್ಲ ಎಂದು ಕೇವಲ ಕೆಂಪಣ್ಣ ಮಾತ್ರವಲ್ಲ, ಇತರೆ ಗುತ್ತಿಗೆದಾರರ ಸಂಘದ ಪದಾಧಿಕಾರಿಗಳು ಸ್ಪಷ್ಟನೆ ನೀಡಿದ್ದಾರೆ. ಕೇವಲ ಬಿಜೆಪಿ ಪ್ರಾಯೋಜಿತ ಗುತ್ತಿಗೆದಾರರು ಮಾತ್ರ ಸರ್ಕಾರದ ವಿರುದ್ಧ ಕಮೀಷನ್ ಆರೋಪ ಮಾಡುತ್ತಿದ್ದಾರೆ ಎಂದು ಉಪಮುಖ್ಯ ಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದ ಜನರಿಗೆ ದಕ್ಷ, ಭ್ರಷ್ಟಾಚಾರರಹಿತ ಆಡಳಿತ ನೀಡುವ ವಚನ ನೀಡಿ ಅಧಿಕಾರಕ್ಕೆ ಬಂದಿದ್ದು, ಪಾರದರ್ಶಕವಾಗಿ ಆಡಳಿತ ಮಾಡಲು ಬದ್ಧರಾಗಿದ್ದೇವೆ. ಕರ್ನಾಟಕವನ್ನು ದಕ್ಷ ಆಡಳಿತ ರಾಜ್ಯವಾಗಿ ಮಾಡುವುದು ನಮ್ಮ ಕನಸು. ಇದಕ್ಕಾಗಿ ಜನ ನಮಗೆ ಆಶೀರ್ವಾದ ಮಾಡಿದ್ದಾರೆ ಎಂದರು.

ನಾನು, ಸಿದ್ದರಾಮಯ್ಯ ಅವರು ನಮ್ಮದೇ ಆದ ರಾಜಕೀಯ ಹಿನ್ನೆಲೆ ಹೊಂದಿದ್ದೇವೆ. ಕೆಂಪಣ್ಣ ಅವರು ಬಹಳ ಹಿರಿಯ ಹಾಗೂ ಗೌರವಾನ್ವಿತ ವ್ಯಕ್ತಿ. ಅವರು ಬಹಳ ಜವಾಬ್ದಾರಿ ಹೊಂದಿದ್ದಾರೆ. ಅವರು ಬಿಜೆಪಿ ಸರ್ಕಾರ ಬಾಕಿ ಉಳಿಸಿರುವ ಬಿಲ್ ಪಾವತಿ ಬಗ್ಗೆ ಮನವಿ ಮಾಡಲು ನನ್ನನ್ನು ಭೇಟಿ ಮಾಡಿದ್ದರು. ಬಿಜೆಪಿ ಸರ್ಕಾರ ಯಾಕೆ ಬಿಲ್ ಪಾವತಿ ಮಾಡಲಿಲ್ಲ? ಎಂಬುದು ನನ್ನ ಪ್ರಶ್ನೆ ಎಂದರು. ಈಗ ನಮ್ಮ ಮುಖ್ಯಮಂತ್ರಿಗಳ ನಿರ್ದೇಶನ ದಂತೆ ಕಾಮಗಾರಿಗಳ ತನಿಖೆ ಮಾಡಿ ಪ್ರಾಮಾಣಿಕವಾಗಿ ಕೆಲಸ ಮಾಡಿರುವ ವರಿಗೆ ಬಿಲ್ ಪಾವತಿ ಮಾಡಲಾಗುವುದು. ಯಾವುದೇ ಗುತ್ತಿಗೆದಾರರಿಗೆ ಕಿರುಕುಳ ನೀಡುವುದು ನಮ್ಮ ಉದ್ದೇಶವಲ್ಲ.

ಕೆಂಪಣ್ಣ ಮಾತ್ರ ಅಲ್ಲ, ಇತರೆ ಗುತ್ತಿಗೆದಾರರ ಸಂಘದ ಪದಾಧಿಕಾರಿಗಳು ಸರ್ಕಾರದ ಯಾವುದೇ ಸಚಿವರು ಲಂಚ ಕೇಳಿಲ್ಲ ಎಂದು ಸ್ಪಷ್ಟನೆ ನೀಡಿದ್ದಾರೆ. ಆದರೆ ಈ ವಿಚಾರ ರಾಜಕೀಯ ಮಾಡಿ, ಗುತ್ತಿಗೆದಾರರನ್ನು ಬಳಸಿಕೊಂಡು ಅಶೋಕ್, ಅಶ್ವತ್ಥ್ ನಾರಾಯಣ, ಗೋಪಾಲಯ್ಯ ಅವರು ತಮ್ಮ ತಿಮಿಂಗಲ ಗಳನ್ನು ರಕ್ಷಣೆ ಮಾಡಿ ಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಬಿಜೆಪಿ ಪ್ರಾಯೋಜಿತ ಗುತ್ತಿಗೆದಾರರು ಮಾತ್ರ ಈ ಆರೋಪ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

# ಅದಾನಿ ಕಂಪನಿಯ ಲೆಕ್ಕಪರಿಶೋಧಕ ಸಂಸ್ಥೆ ರಾಜೀನಾಮೆ

ನವದೆಹಲಿ, ಆ. 12 – ಅದಾನಿ ಸಮೂಹದ ಬಂದರು ಕಂಪನಿಯ ಲೆಕ್ಕಪರಿಶೋಧಕ ಸ್ಥಾನಕ್ಕೆ ಡೆಲಾಯ್ಟ್ ಸಂಸ್ಥೆ ರಾಜೀನಾಮೆ ನೀಡಿದೆ. ಇತ್ತೀಚೆಗೆ ಹಿಂಡನ್‌ಬರ್ಗ್ ಸಂಸ್ಥೆ ನೀಡಿದ ವರದಿಯ ಹಿನ್ನೆಲೆಯಲ್ಲಿ ಅದಾನಿ ಸಮೂಹದ ಕೆಲ ವಹಿವಾಟುಗಳ ಬಗ್ಗೆ ಡೆಲಾಯ್ಟ್ ಕಳವಳ ವ್ಯಕ್ತಪಡಿಸಿತ್ತು.

ಅದಾನಿ ಪೋರ್ಟ್ಸ್ ಅಂಡ್ ಸ್ಪೆಷಲ್ ಎಕನಾಮಿಕ್ ಝೋನ್ (ಎ.ಪಿ.ಎಸ್.ಇ.ಝಡ್.) ಕಂಪನಿಯ ಲೆಕ್ಕಪರಿಶೋಧನೆಯಿಂದ ಡೆಲಾಯ್ಟ್ ಹೊರ ಬಿದ್ದಿದೆ. 2017ರಿಂದ ಡೆಲಾಯ್ಟ್ ಲೆಕ್ಕ ಪರಿಶೋಧನೆ ನಡೆಸುತ್ತಿತ್ತು. ಕಳೆದ ಜುಲೈ 2022ರಲ್ಲಿ ಕಂಪನಿಯ ಅವಧಿಯನ್ನು ಐದು ವರ್ಷ ಕಾಲ ವಿಸ್ತರಿಸಲಾಗಿತ್ತು.

ಈ ಬಗ್ಗೆ ಹೇಳಿಕೆ ನೀಡಿರುವ ಎ.ಪಿ.ಎಸ್.ಇ.ಝಡ್., ಅದಾನಿ ಸಮೂಹದ ಇತರೆ ಕಂಪನಿಗಳ ಲೆಕ್ಕ ಪರಿಶೋಧನೆ ರೀತಿಯಲ್ಲಿ ತನಗೆ ವ್ಯಾಪಕ ಅವಕಾಶ ನೀಡಬೇಕು ಎಂದು ಡೆಲಾಯ್ಟ್ ಕೇಳಿತ್ತು.

ಆದರೆ, ಅದಾನಿ ಸಮೂಹದ ಇತರೆ ಕಂಪನಿಗಳು ಸಂಪೂರ್ಣ ಸ್ವತಂತ್ರವಾಗಿವೆ. ಎಲ್ಲ ಕಂಪನಿಗಳು ಪ್ರತ್ಯೇಕ ಮಂಡಳಿ, ಕಾರ್ಯಕಾರಿ ತಂಡ ಹಾಗೂ ಅಲ್ಪಸಂಖ್ಯಾತರ ಷೇರುದಾರರನ್ನು ಹೊಂದಿವೆ.

ಈ ಹಿನ್ನೆಲೆಯಲ್ಲಿ ಡೆಲಾಯ್ಟ್ ಕಂಪನಿಯ ಮನವಿ ಒಪ್ಪಿರಲಿಲ್ಲ ಎಂದು ಹೇಳಿದೆ.

# ನಗರದಲ್ಲಿ ಇಂದು 'ಕಲಾ ಕೃತಿಕ - 2023' ಫ್ಯಾಷನ್ ಶೋ

ಕಲಾನಿ-ಕೇತನ ಕಾಲೇಜ್ ಆಫ್ ಫ್ಯಾಷನ್ ಡಿಜೈನಿಂಗ್ ವತಿಯಿಂದ ಕಲಾ ಕೃತಿಕ -2023' ಫ್ಯಾಷನ್ ಶೋ ಮತ್ತು 'ಮಿಸ್. ಫ್ಯಾಷನ್ ಫ್ಲೋರಿಶ್–23' ಸ್ಪರ್ಧೆ ಕಾರ್ಯಕ್ರಮವನ್ನು ಇಂದು ಬೆಳಿಗ್ಗೆ 10 ಗಂಟೆಗೆ ಹೋಟೆಲ್ ಪೂಜಾ ಅಂತರರಾಷ್ಟ್ರೀಯ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದ ಉದ್ಘಾಟನೆಯನ್ನು ಮಾಜಿ ಶಾಸಕ ಹೆಚ್.ಪಿ. ರಾಜೇಶ್ ಉದ್ಘಾಟಿಸಲಿದ್ದಾರೆ. ಅಕಾಡೆಮಿ ಆಫ್ ಕ್ರಿಯೇಟಿವ್ ಎಜುಕೇಷನ್ ಕಾರ್ಯದರ್ಶಿ ಅಶೋಕ ರಾಯಬಾಗಿ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಇತರೆ ಗಣ್ಯರು ಆಗಮಿಸಲಿದ್ದಾರೆ.

ಕಾಲೇಜಿನ ವಿದ್ಯಾರ್ಥಿನಿಯರು ತಾವುಗಳೇ ವಿನ್ಯಾಸಗೊಳಿಸಿದ ವೈವಿಧ್ಯಮಯ ಮತ್ತು ಕಲಾತ್ಮಕವಾದ ವಸ್ತ್ರ ವಿನ್ಯಾಸ ಪ್ರದರ್ಶನವನ್ನು ನಡೆಸಿಕೊಡಲಿದ್ದು, ಸುಮಾರು 150 ವಸ್ತ್ರ ವಿನ್ಯಾಸಗಳನ್ನು ಉತ್ಸವದಲ್ಲಿ ಪ್ರದರ್ಶಿಸಲಾಗುವುದು.

ಪ್ರದರ್ಶನದ ನಂತರ ಸಂಜೆ 5.30 ರಿಂದ ಸಮಾರೋಪ ಸಮಾರಂಭವನ್ನು ಆಯೋಜಿಸಲಾಗಿದೆ.

ಉದಯೋನ್ಮುಖ ಯುವ ಮಹಿಳೆಯರಿಗೆ ಮಾಡೆಲಿಂಗ್ ಕ್ಷೇತ್ರವನ್ನು ಪ್ರವೇಶಿಸಲು ಮಿಸ್ ಫ್ಯಾಷನ್, ಫ್ಲೋರಿಶ್-01 ಸ್ಪರ್ಧೆಯನ್ನು ಹಮ್ಮಿಕೊಂಡಿದ್ದು ಈ ಸ್ಪರ್ಧೆಯ ಅಂತಿಮ ಸುತ್ತು ಕಾಲೇಜಿನ ಕಲಾ ಕೃಷಿಕ 2023 ವೇದಿಕೆಯಲ್ಲಿ ಕಲ್ಪಿಸಲಾಗಿದೆ.


**ಹುಟ್ಟು ಹಬ್ಬದ ಶುಭಾಶಯಗಳು**





ದಾವಣಗೆರೆ ವಕೀಲರ ಸಹಕಾರ ಸಂಘದ ಅಧ್ಯಕ್ಷರೂ, ಬಿಜೆಪಿ ಕಾನೂನು ಪ್ರಕೋಷ್ಠದ ಜಿಲ್ಲಾ ಸಂಚಾಲಕರೂ ದಾವಣಗೆರೆ ಜಿಲ್ಲಾ ವಕೀಲರ ಸಂಘದ ಮಾಜಿ ಉಪಾಧ್ಯಕ್ಷರೂ, ನಮ್ಮ ಆತ್ಮೀಯರೂ ಆದ

**ಶ್ರೀ ಹೆಚ್. ದಿವಾಕರ್**

**ಇವರಿಗೆ ಹುಟ್ಟು ಹಬ್ಬದ ಶುಭಾಶಯಗಳು.**

- **ಎಲ್. ದಯಾನಂದ್,** ದಾವಣಗೆರೆ ಜಿಲ್ಲಾ ಅಧಿವಕ್ತ ಪರಿಷತ್, ಜಿಲ್ಲಾಧ್ಯಕ್ಷರು.
- **ಎ.ಸಿ. ರಾಘವೇಂದ್ರ,** ವಕೀಲರು, ರಾಜ್ಯ ಸಮಿತಿ ಸದಸ್ಯರು, ಬಿಜೆಪಿ ರಾಜ್ಯ ಕಾನೂನು ಪ್ರಕೋಷ್ಠ.
- **ಅಜೀರ್ ಪಠಾಣ್,** ಮಾಲೀಕರು, ಎಸ್‌ಎಸ್‌ಎಸ್ ಎಂಟರ್ ಪ್ರೈಸಸ್, ದಾವಣಗೆರೆ
- ಎ.ಎಸ್.ಮಂಜುನಾಥ್ • ಕಿರಣ್ ಕುಮಾರ್ ಸುರ್ವೆ
- ತಿರುಮಲ್ಲೇಶ್ • ಸಿದ್ದಲಿಂಗೇಶ್ವರ (ಸಿದ್ದು)
- **ಶ್ರೀ ಸಾಯಿನಿಧಿ ಕಮ್ಯೂನಿಕೇಷನ್ಸ್,** ರಾಂ ಅಂಡ್ ಕೋ ಸರ್ಕಲ್, ದಾವಣಗೆರೆ.,
- ಆಲೂರು ಪ್ರಕಾಶ್ • ಪ್ರಶಾಂತ್ • ಡಿ.ಎಸ್. ಶಿವಶಂಕರಪ್ಪ
- ಕೆ. ಜಗದಪ್ಪ. • ಡಿ.ಎಂ. ಕಾಂತರಾಜ್



**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ**
ದಾವಣಗೆರೆ ವಿಭಾಗ, ದಾವಣಗೆರೆ

ಸಂಖ್ಯೆ: ಕರಾಸಾ/ದಾವಿ/ಸಂಚಾರ/ವಾಣಿಜ್ಯ/1304/2023–24 ದಿನಾಂಕ: 10.08.2023

**ಇ–ಟೆಂಡರ್ / ಸಂಧಾನ ಪ್ರಕಟಣೆ ಸಂಖ್ಯೆ: 02/2023–24**

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ದಾವಣಗೆರೆ ವಿಭಾಗದ ವ್ಯಾಪ್ತಿಯಲ್ಲಿ ಇರುವ, ಮಲೆಬೆನ್ನೂರು ಬಸ್ ನಿಲ್ದಾಣದ ಹೊರಭಾಗದಲ್ಲಿ ಜಾಹೀರಾತು ಅಳವಡಿಸಲು ಯೂನಿಪೋಲ್ಸ್, ಆರ್ಚ್ ಮತ್ತು ಹೋರ್ಡಿಂಗ್ಸ್ ಖಾಲಿ ಇದ್ದು, ಸದರಿ ಬಸ್ ನಿಲ್ದಾಣದ ಹೊರಭಾಗದ ಜಾಹೀರಾತು ಸ್ಥಳಗಳಿಗೆ ಪರವಾನಿಗೆದಾರರನ್ನು ಆಯ್ಕೆ ಮಾಡಲು ಇ-ಟೆಂಡರ್ (ಇ–ಪ್ರೊಕ್ಯೂರ್‌ಮೆಂಟ್) ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಹರಿಹರ ಬಸ್ ನಿಲ್ದಾಣದ ಹೊರಭಾಗದಲ್ಲಿ ಜಾಹೀರಾತು ಅಳವಡಿಸಲು ಯೂನಿಪೋಲ್ಸ್, ಆರ್ಚ್ ಮತ್ತು ಹೋರ್ಡಿಂಗ್ಸ್ ಹಾಗೂ ಜಗಳೂರು ಬಸ್ ನಿಲ್ದಾಣದ ಹೊರಭಾಗದಲ್ಲಿ ಅಳವಡಿಸಲು ಹೋರ್ಡಿಂಗ್ಸ್‌ಗಳು ಖಾಲಿ ಇದ್ದು, ಸದರಿ ಬಸ್ ನಿಲ್ದಾಣದ ಹೊರಭಾಗದ ಜಾಹೀರಾತು ಸ್ಥಳಗಳಿಗೆ ಪರವಾನಿಗೆದಾರರನ್ನು ಆಯ್ಕೆ ಮಾಡಲು ಸಂಧಾನದ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಸದರಿ ಮಾಹಿತಿಯನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in ಹಾಗೂ ನಿಗಮದ ವೆಬ್‌ಸೈಟ್ ksrtc.karnataka.gov.in ನಲ್ಲಿ ದಿ: 10.08.2023 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ. ನಿಗಮ, ದಾವಣಗೆರೆ ವಿಭಾಗ–577 002 ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಂಪರ್ಕಿಸುವ ದೂರವಾಣಿ ಸಂಖ್ಯೆ: ವಿಭಾಗೀಯ ಸಂಚಾರ ಅಧಿಕಾರಿ–7760990452, ಸಹಾಯಕ ಸಂಚಾರ ಅಧೀಕ್ಷಕರು–7022030183.

ಸಹಿ/–
ವಿಭಾಗೀಯ ನಿಯಂತ್ರಣಾಧಿಕಾರಿ
ಕ.ರಾ.ರ.ಸಾ.ನಿಗಮ, ದಾವಣಗೆರೆ ವಿಭಾಗ

ವಾಸಾಸಂಇ/ಬೆಂ.ನಗರ/889/ಆಕಾರ್/2023–24



**ಸಾರ್ವಜನಿಕ ಪ್ರಕಟಣೆ**

ನಮ್ಮ ಕಕ್ಷಿಗಾರನಾದ **ಟಿ.ಎಂ. ರಾಜೇಂದ್ರ ಪ್ರಸಾದ್ ಬಿನ್ ಟಿ. ಮಹಾದೇವಪ್ಪ,** ವಯಸ್ಸು : 62 ವರ್ಷ, ವಾಸ: 1C9, 2036/14 ತರಳಬಾಳು ಬಡಾವಣೆ, ದಾವಣಗೆರೆ ಇವರ ಮೊಬೈಲ್ ನಂ:9448490555 ಆಗಿರುತ್ತದೆ. ಇವರು ಈ ಕೆಳಕಂಡ ಷೆಡ್ಯೂಲ್ ಆಸ್ತಿಗಳನ್ನು **ಶ್ರೀಮತಿ ಆಶಾರಾಣಿ ಕೆ.ಬಿ. ಕೋಂ. ರಮೇಶ ಜಿ.ಎಸ್.** ವಯಸ್ಸು:37 ವರ್ಷ, ವಾಸ: #39, 5ನೇ ಕ್ರಾಸ್, 'ಎ' ಬ್ಲಾಕ್, ದೇವರಾಜ್ ಅರಸ್ ಬಡಾವಣೆ, ಹೊಸ ಕೋರ್ಟ್ ಹಿಂಭಾಗ, ದಾವಣಗೆರೆ ಇವರಿಂದ ಇಂದಿನ ಮಾರ್ಕೆಟ್ ಬೆಲೆಗೆ ಈ ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರಿಸಿರುವ ಆಸ್ತಿಗಳನ್ನು ಖರೀದಿ ಮಾಡಲು ಇಚ್ಛಿಸಿರುತ್ತಾರೆ. ಆದ್ದರಿಂದ ಈ ಕೆಳಕಂಡ ಷೆಡ್ಯೂಲ್ ಆಸ್ತಿಗಳ ಬಗ್ಗೆ ಯಾರಿಂದಲಾದರೂ ತಂಟೆ-ತಕರಾರು ಇದ್ದಲ್ಲಿ ಈ ಪತ್ರಿಕಾ ಪ್ರಕಟಣೆ ಆದ 15 ದಿನಗಳ ಒಳಗಾಗಿ ನಮಗಾಗಲೀ ಅಥವಾ ನಮ್ಮ ಕಕ್ಷಿಗಾರರಿಗಾಗಲೀ ಬಂದು ತಿಳಿಸತಕ್ಕದ್ದು, ಈ ವಾಯಿದೆ ಮುಗಿದ ನಂತರ ಬಂದು ತಕರಾರು ಮಾಡಿದಲ್ಲಿ ನಮ್ಮ ಕಕ್ಷಿಗಾರರು ಹೊಣೆಗಾರರಲ್ಲ.

**ಷೆಡ್ಯೂಲ್, ಆಸ್ತಿಗಳ ವಿವರ**

1. ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಬೇತೂರು ಗ್ರಾಮದ ರಿ.ಸರ್ವೆ ನಂಬರ್:154/1ಎ1 ವಿಸ್ತೀರ್ಣ ಎಕರೆ ಒಂದು, ಗುಂಟೆ-03, ಆಕಾರ ರೂ.1-49 ಪೈಸೆವುಳ್ಳ ಖುಷ್ಕಿ ಜಮೀನಿಗೆ **ಚಕ್ಕುಬಂದಿ ಪೂರ್ವಕ್ಕೆ:** ಯು.ಕೆ.ಹನುಮಂತಪ್ಪ ಇವರ ಜಮೀನು, **ಪಶ್ಚಿಮಕ್ಕೆ:** ಕೆ.ಜಿ. ಶೇಖರಪ್ಪ ಇವರ ಜಮೀನು, **ಉತ್ತರಕ್ಕೆ:** ದಾರಿ, ದಕ್ಷಿಣ : ಎ.ಕೆ. ಮಂಜಪ್ಪ ಇವರ ಜಮೀನು, ಈ ಮಧ್ಯದ ಜಮೀನು.

2. ದಾವಣಗೆರೆ ತಾಲ್ಲೂಕು, ಸಬ್ ರಿಜಿಸ್ಟ್ರಾರ್ ರವರ ಆಫೀಸಿನ ಅಧಿಕಾರಕ್ಕೆ ಒಳಪಟ್ಟ, ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಬೇತೂರು ಗ್ರಾಮದ ರಿ. ಸರ್ವೆ ನಂಬರ್:154/6, ವಿಸ್ತೀರ್ಣ ಎಕರೆ-ಇಲ್ಲಾ, ಗುಂಟೆ-19 (00-19) ಆಕಾರ ರೂ. 56 ಪೈಸೆವುಳ್ಳ ತರೀ ಜಮೀನಿಗೆ ಚಕ್ಕುಬಂದಿ ಪೂರ್ವಕ್ಕೆ: ಎ.ಕೆ. ಹಟ್ಟಿ, ಪಶ್ಚಿಮಕ್ಕೆ-ಸಂತೋಷ್ ಬಿನ್ ಗೌಡ್ರ ಶೇಖರಪ್ಪ ಇವರ ಜಮೀನು ಉತ್ತರಕ್ಕೆ: ಆಶಾರಾಣಿ ಆದ ನಿಮ್ಮ ಬಾಬ್ತು ಜಮೀನು, ದಕ್ಷಿಣಕ್ಕೆ: ಸತೀಶ್ ಬಿನ್ ಗೌಡ್ರ ಶೇಖರಪ್ಪ ಇವರ ಜಮೀನು ಮತ್ತು ಗೌಡ್ರ ಉಜ್ಜಪ್ಪನವರ ಜಮೀನು ಈ ಮಧ್ಯದ ಜಮೀನು.

3. ದಾವಣಗೆರೆ ತಾಲ್ಲೂಕು, ಸಬ್ ರಿಜಿಸ್ಟ್ರಾರ್‌ರವರ ಆಫೀಸಿನ ಅಧಿಕಾರಕ್ಕೆ ಒಳಪಟ್ಟ, ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಬೇತೂರು ಗ್ರಾಮದ ರಿ. ಸರ್ವೆ ನಂಬರ್ 153/3 ವಿಸ್ತೀರ್ಣ ಎಕರೆ-ಇಲ್ಲಾ ಗುಂಟೆ-ಇಪ್ಪತ್ತೈದು (00-25), ಆಕಾರ ರೂ.-1.84 ಪೈಸೆವುಳ್ಳ ಹಳ್ಳದ ನೀರಿನ ಖುಷ್ಕಿ ಜಮೀನಿಗೆ ಚಕ್ಕುಬಂದಿ ಪೂರ್ವಕ್ಕೆ: ಸತೀಶ್ ಇವರ ಜಮೀನು, ಪಶ್ಚಿಮಕ್ಕೆ: ಬಸವರಾಜ್ ಬಿನ್ ಲೇ|| ಕೆ.ಜಿ. ಸಣ್ಣಬಸಪ್ಪ ಇವರ ಜಮೀನು, ಉತ್ತರ: ಆಶಾರಾಣಿ ಕೆ.ಬಿ. ಆದ ನಿಮ್ಮ ಬಾಬ್ತು ಜಮೀನು, ದಕ್ಷಿಣಕ್ಕೆ:- ಹಳ್ಳ ಈ ಮಧ್ಯದ ಜಮೀನು.

4. ದಾವಣಗೆರೆ ತಾಲ್ಲೂಕು, ಸಬ್ ರಿಜಿಸ್ಟ್ರಾರ್‌ರವರ ಆಫೀಸಿನ ಅಧಿಕಾರಕ್ಕೆ ಒಳಪಟ್ಟ, ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಬೇತೂರು ಗ್ರಾಮದ ರಿ. ಸರ್ವೆ ನಂಬರ್:153/4, ವಿಸ್ತೀರ್ಣ ಎಕರೆ ಇಲ್ಲಾ ಗುಂಟೆ-ಇಪ್ಪತ್ತೈದು (00-25) ಆಕಾರ ರೂ.-1.84 ಪೈಸೆವುಳ್ಳ ಹಳ್ಳದ ನೀರಿನ ಖುಷ್ಕಿ ಜಮೀನಿಗೆ ಚಕ್ಕುಬಂದಿ ಪೂರ್ವಕ್ಕೆ: ಕೆ. ಕರಿಬಸಪ್ಪ ಇವರ ಜಮೀನು, ಪಶ್ಚಿಮಕ್ಕೆ: ಉಜ್ಜಪ್ಪ ಕೆ.ಜಿ. ಮತ್ತು ಜಯಮ್ಮ ಇವರಿಂದ ಈ ದಿನ ನೀವೇ ಕ್ರಯಕ್ಕೆ ಪಡೆದ ರಿ.ಸರ್ವೆ ನಂಬರ್: 153/3ರ 00-25 ಗುಂಟೆ ಜಮೀನು, ಉತ್ತರಕ್ಕೆ: ಆಶಾರಾಣಿ ಕೆ.ಬಿ. ಆದ ನಿಮ್ಮ ಬಾಬ್ತು ಜಮೀನು, ದಕ್ಷಿಣಕ್ಕೆ:- ಹಳ್ಳ. ಈ ಮಧ್ಯದ ಜಮೀನು.

**(ಬಿ.ಜಿ. ರೇವಣಸಿದ್ದಪ್ಪ)**
**ವಕೀಲರು ಮತ್ತು ನೋಟರಿ**
ಹಳೇ ಕೋರ್ಟ್ ಆವರಣ, ಜನತಾ ಬಜಾರ್ ಪಕ್ಕ,
ದಾವಣಗೆರೆ - 577002.
**ಮೊಬೈಲ್ ನಂ. 98444 43122**

**ಕಕ್ಷಿಗಾರರ ಸಹಿ**
ದಿನಾಂಕ : 13.08.2023
ಸ್ಥಳ : ದಾವಣಗೆರೆ

# ಕಕ್ಷಿದಾರರ ಸಮಸ್ಯೆ ಬಗೆಹರಿಸುವಲ್ಲಿ ವಕೀಲರ ಪಾತ್ರ ಮುಖ್ಯ

## ಮೈಸೂರಿನಲ್ಲಿನ ವಕೀಲರ ಸಮಾವೇಶದಲ್ಲಿ ಸಿಎಂ ಸಿದ್ದರಾಮಯ್ಯ



ಮೈಸೂರು, ಆ.12- ಸಮಾಜದ ಕಕ್ಷಿದಾರರ ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ ವಕೀಲರ ಪಾತ್ರ ಬಹುಮುಖ್ಯವಾಗಿದೆ. 14 ವರ್ಷಗಳ ನಂತರ ತನ್ನ ತವರು ಜಿಲ್ಲೆಯಲ್ಲಿ ವಕೀಲರ ಸಮಾವೇಶ ಜರುಗುತ್ತಿರುವುದು ಸಂತೋಷ ತಂದಿದೆ ಎಂದು ಮುಖ್ಯಮಂತ್ರಿ ಸಿದ್ಧರಾಮಯ್ಯ ಹೇಳಿದರು.

ನಗರದ ದಸರಾ ವಸ್ತು ಪ್ರದರ್ಶನ ಮೈದಾನದಲ್ಲಿ ಕರ್ನಾಟಕ ರಾಜ್ಯ ವಕೀಲರ ಪರಿಷತ್ತು ಹಾಗೂ ಮೈಸೂರು ವಕೀಲರ ಸಂಘ ಇವರ ಸಹಕಾರದೊಂದಿಗೆ ರಾಜ್ಯಮಟ್ಟದ ಹತ್ತನೇ ವಕೀಲರ ರಾಜ್ಯಮಟ್ಟದ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

ವಕೀಲರ ಹಿತರಕ್ಷಣೆ ಕಾಯ್ದೆ ಜಾರಿಗೆ ತರಲು ಶ್ರಮಿಸುತ್ತೇನೆ. ವಕೀಲರ ವೃತ್ತಿಯಲ್ಲಿ ಬರುವ ಸಮಸ್ಯೆಗಳನ್ನು ಬಗೆಹರಿಸಲು ಹಿತರಕ್ಷಣೆ ಕಾಯ್ದೆ ಬಹುಮುಖ್ಯವಾಗಿದೆ ಎಂದರು.

ಹಿಂದಿನ ನಮ್ಮ ಸರ್ಕಾರದಲ್ಲಿ 160 ಭರವಸೆಗಳಲ್ಲಿ 158 ಭರವಸೆಗಳನ್ನು ಪೂರೈಸಿದ್ದು, ಇವತ್ತಿನ ಸರ್ಕಾರದಲ್ಲಿ 5 ಗ್ಯಾರಂಟಿಗಳನ್ನು ಜಾರಿಗೆ ತಂದಿದ್ದೇವೆ. ಕರ್ನಾಟಕ ವಕೀಲರ ಪರಿಷತ್ತಿಗೆ ಜಾಗವನ್ನು ಕೊಟ್ಟರೆ ಕಟ್ಟಡವನ್ನು ಕಟ್ಟಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ ಎಂದರು.

ವಕೀಲರ ಸಮಸ್ಯೆಗಳನ್ನು ಹಂತ ಹಂತವಾಗಿ ಬಗೆಹರಿಸುತ್ತೇನೆ. ನಕಾರಾತ್ಮಕ ಯೋಚನೆಗಳಿಗಿಂತ ಸಕಾರಾತ್ಮಕ ಯೋಚನೆಗಳನ್ನು ವಕೀಲರುಗಳು ಮಾಡಬೇಕು. ವಕೀಲರ ಚರ್ಚೆಗಳು ಸಮಾಜಮುಖಿಯಾಗಿ ಇರಲಿ. ನಾವು ಸಂವಿಧಾನದ ಉದ್ದೇಶಗಳಿಗೆ ಬದ್ದರಾಗಿ ಕೆಲಸ ಮಾಡಬೇಕಿದೆ ಎಂದು ಹೇಳಿದರು.

ಪಟ್ಟಭದ್ರ ಹಿತಾಸಕ್ತಿಗಳು ಎಲ್ಲಾ ಕಾಲಮಾನದಲ್ಲಿದ್ದಾರೆ. ಆದರೆ ತಳಸಮುದಾಯದ ವಕೀಲರುಗಳು ಜಾಗೃತರಾಗಿ ಕೆಲಸ ಮಾಡಬೇಕು. ಇವತ್ತು ಸಂವಿಧಾನವನ್ನು ವಿರೋಧಿಸುವ ಜನರು ಇದ್ದಾರೆ. ಅವರಿಂದ ಸಮಾಜಕ್ಕೆ ಒಳ್ಳೆಯ ಕೆಲಸ ಆಗುವುದಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸರ್ವೋಚ್ಚ ನ್ಯಾಯಲಯದ ನ್ಯಾಯಾಧೀಶರಾದ ಎ.ಎಸ್.ಬೋಪಣ್ಣ ಮಾತನಾಡಿ, ನಾನು ಕರ್ನಾಟಕದವನಾಗಿದ್ದು, ಕಳೆದ ನಲವತ್ತು ವರ್ಷಗಳಿಂದ ಉತ್ತಮ ಕೆಲಸ ಮಾಡಿದ ತೃಪ್ತಿ ನನಗಿದೆ. ನಿಮ್ಮ ಹಾಗೆ ಕಳೆದ ಮೂವತ್ತು ವರ್ಷಗಳ ಹಿಂದೆ ಬೆಂಗಳೂರಿನಲ್ಲಿ ವಕೀಲ ವೃತ್ತಿ ಮಾಡಿ, ನಿಮ್ಮಗಳ ಕಷ್ಟ ನಷ್ಟದ ಅರಿವು ನಮಗಿದೆ. ವೃತ್ತಿ ಯಲ್ಲಿ ಸಾಕಷ್ಟು ಅಭ್ಯಾಸ ಮಾಡಿ ಗುರಿ ಸಾಧಿಸಿ ಎಂದರು.

ಕಾನೂನು ಮತ್ತು ಸಂಸದಿಯ ಸಚಿವ ಎಚ್.ಕೆ.ಪಾಟೀಲ್ ಮಾತನಾಡಿ, ಸಮಾಜದಲ್ಲಿ ಅತ್ಯಂತ ಗೌರವ ಇರುವ ಆದರ್ಶವಾದ ವಕೀಲರ ಕಾರ್ಯಕ್ರಮದಲ್ಲಿ ನಾನು ಭಾಗವಹಿಸಿರುವುದು ನಮಗೆ ಹೆಮ್ಮೆ ಎನ್ನಿಸುತ್ತದೆ. ಯಾವುದೇ ದೇಶದಲ್ಲಿ ಕಾನೂನಿನ ಅನುಷ್ಠಾನ ಉತ್ತಮವಾಗಿದ್ದರೆ. ಅಲ್ಲಿ ವಕೀಲರ ಪಾತ್ರ ಮುಖ್ಯವಾಗಿದೆ. ಇಲ್ಲಿ 15 ಸಾವಿರಕ್ಕೂ ಅಧಿಕ ವಕೀಲರು ಭಾಗವಹರಿಸುವುದು ಉತ್ತಮ ಬೆಳವಣಿಗೆಯಾಗಿದೆ ಎಂದು ಹೇಳಿದರು.

ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಹಾಗೂ ಉಚ್ಚ ನ್ಯಾಯಲಯದ ಮುಖ್ಯ ನ್ಯಾಯಾಧೀಶರಾದ ಪ್ರಸನ್ನ ಬಿ.ವರ್ಲೆ ಮಾತನಾಡಿದರು.

ಉಚ್ಚನ್ಯಾಯಲಯದ ನ್ಯಾಯಾಧೀಶರಾದ ಕೆ. ಸೋಮಶೇಖರ.ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಂ. ಮಹದೇವಸ್ವಾಮಿ.ಕಾರ್ಯದರ್ಶಿ ಉಮೇಶ್ ಎಸ್. ಸದಸ್ಯರಾದ ಗೌತಮಚಂದ್, ಆಸೀಫ್ ಆಲಿ ಶೇಖ್ ಹುಸೇನ್, ಮುಗದಂ ಆನಂದಕುಮಾರ್ ಅಪ್ಪು, ದಾವಣಗೆರೆ ವಕೀಲರ ಸಂಘದ ಅಧ್ಯಕ್ಷ ಎಲ್.ಎಚ್.ಅರುಣಕುಮಾರ್, ಕಾರ್ಯದರ್ಶಿ ಎಸ್.ಬಸವರಾಜ್, ಉಪಾಧ್ಯಕ್ಷ ಬಸವರಾಜ ಗೋಪನಾಳು, ಸಹ ಕಾರ್ಯದರ್ಶಿ ಎ.ಎಸ್.ಮಂಜುನಾಥ, ಪ್ರಕಾಶ ಪಾಟೀಲ್, ಯು.ಜಿ.ಶಿವಾನಂದ, ಎಂ.ರೇವಣಸಿದ್ದಯ್ಯ, ಹರಪನಹಳ್ಳಿ ವಕೀಲರ ಸಂಘದ ಉಪಾಧ್ಯಕ್ಷ ವಿರೂಪಾಕ್ಷಿ, ಕಾರ್ಯದರ್ಶಿ ಆನಂದ, ವಕೀಲ ಎಸ್.ಎಂ.ರುದ್ರಮುನಿ, ವಿ.ಜಿ.ಪ್ರಕಾಶಗೌಡ, ರಾಂ ಭಟ್, ಕೆ.ಉಚ್ಚೆಂಗೆಪ್ಪ, ಎಂ.ಸುರೇಶ, ಜಿಟ್ಟಿನಕಟ್ಟಿ ಮಂಜುನಾಥ, ದ್ರಾಕ್ಷಾಯಣಮ್ಮ, ರೇಣುಕಾ ಮೇಟಿ, ಮಲ್ಲಮ್ಮ ಪ್ರಸಾದನಾಯ್ಕ ಸೇರಿದಂತೆ ಇತರರಿದ್ದರು.

# ನಗರದಲ್ಲಿ ಇಂದು ಸಹಕಾರಿಗಳಿಂದ ನೂತನ ಸಚಿವರು, ಶಾಸಕರಿಗೆ ಅಭಿನಂದನೆ

ದಾವಣಗೆರೆ, ಆ. 12- ಜಿಲ್ಲಾ ಸಹಕಾರಿಗಳಿಂದ ನೂತನ ಸಚಿವರು ಮತ್ತು ಶಾಸಕರುಗಳಿಗೆ ನಾಳೆ ದಿನಾಂಕ 13 ರಂದು ಭಾನುವಾರ ಬೆಳಿಗ್ಗೆ 11.30 ಕ್ಕೆ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ಅಭಿನಂದನಾ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿರ್ದೇಶಕ ಜೆ.ಆರ್. ಷಣ್ಮುಖಪ್ಪ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಹಕಾರ ಸಚಿವ ಕೆ.ಎನ್. ರಾಜಣ್ಣ ಕಾರ್ಯಕ್ರಮ ಉದ್ಘಾಟಿಸುವರು. ಅಧ್ಯಕ್ಷತೆಯನ್ನು ಜೆ.ಆರ್. ಷಣ್ಮುಖಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ.

ಇದೇ ವೇಳೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಶಾಸಕರಾದ ಶಾಮನೂರು ಶಿವಶಂಕರಪ್ಪ, ಡಿ.ಜಿ. ಶಾಂತನಗೌಡ, ಬಿ. ದೇವೇಂದ್ರಪ್ಪ, ಕೆ.ಎಸ್. ಬಸವಂತಪ್ಪ, ಬಿ.ಪಿ. ಹರೀಶ್, ಬಸವರಾಜ್ ಶಿವಗಂಗಾ ಅವರನ್ನು ಅಭಿನಂದಿಸಲಾಗುವುದು.

ಮುಖ್ಯ ಅತಿಥಿಗಳಾಗಿ ಎನ್.ಜಿ. ಪುಟ್ಟಸ್ವಾಮಿ, ಸಿರಿಗೆರೆ ರಾಜಣ್ಣ, ಜಗದೀಶಪ್ಪ ಬಣಕಾರ್, ಜೆ.ಎಸ್. ವೇಣುಗೋಪಾಲ ರೆಡ್ಡಿ, ಬೆಳ್ಳೂಡಿ ರಾಮಚಂದ್ರಪ್ಪ, ಬಿ. ಹಾಲೇಶಪ್ಪ, ಹೆಚ್.ಕೆ. ಬಸಪ್ಪ, ಆರ್.ಎಂ. ರವಿ, ಬಿ. ಶೇಖರಪ್ಪ, ಜಿ.ಡಿ. ಗುರುಸ್ವಾಮಿ, ಬೇತೂರು ರಾಜಣ್ಣ ಮತ್ತಿತರರು ಭಾಗವಹಿಸಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಸಹಕಾರಿಗಳಾದ ಎನ್.ಜಿ. ಪುಟ್ಟಸ್ವಾಮಿ, ಸಿರಿಗೆರೆ ರಾಜಣ್ಣ, ಬಿ. ಹಾಲೇಶಪ್ಪ, ಜಿ.ಡಿ. ಗುರುಸ್ವಾಮಿ, ಬಿ. ಶೇಖರಪ್ಪ, ಬೇತೂರು ಟಿ. ರಾಜಣ್ಣ, ಬಿ. ಉಮೇಶಕುಮಾರ್, ಕೆ.ಹೆಚ್. ಷಣ್ಮುಖಪ್ಪ, ಮುರಿಗೇಂದ್ರಯ್ಯ, ಕೆ.ಜಿ. ಸುರೇಶ, ಭೂಮೇಶ್ವರಪ್ಪ, ವೈ. ಲೋಕೇಶ್ ಮತ್ತಿತರರಿದ್ದರು.

## ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ

ದಾವಣಗೆರೆ, ಆ.12- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕರಾಮುವಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಕರ್ನಾಟಕ ಸರ್ಕಾರ ನಡೆಸಲಿರುವ ಪಿ.ಡಿ.ಒ, ಎಫ್.ಡಿ.ಎ, ಎಸ್.ಡಿ.ಎ ಹುದ್ದೆಗಳ ನೇಮಕಾತಿಗೆ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 45 ದಿನಗಳ ತರಬೇತಿಯನ್ನು ಆಯೋಜಿಸಲಾಗಿದೆ. ಆಸಕ್ತರು ನಾಡಿದ್ದು ದಿನಾಂಕ 14 ರೊಳಗಾಗಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು.

ಹೆಚ್ಚಿನ ಮಾಹಿತಿಗಾಗಿ ದೂ.ಸಂ: 0821-2515944 ಸಂಪರ್ಕಿಸಲು ಕರಾಮುವಿ ಕುಲಸಚಿವ ಪ್ರೊ. ಕೆ.ಎಲ್.ಎನ್ ಮೂರ್ತಿ ತಿಳಿಸಿದ್ದಾರೆ.

## ಶಿವ ಸಿಂಪಿ ಸಮಾಜ...

ಶಿವನ ಶಿವ ಸಿಂಪಿಗರು
ನಾವೆಲ್ಲರೂ ಅವನ ಭಕ್ತರು
ಶಿವನ ಶ್ರದ್ಧೆಯ ಆರಾಧಕರು
ನಮಗೆಲ್ಲಾ ಆ ಶಿವನ ಕೃಪಾ ಕಟಾಕ್ಷವೂ....!!!

ಕುಲ ಗುರುಗಳ ಗುರುಗಳೇ
ಶರಣ ಶಿವ ದಾಸಿಮಯ್ಯ ನವರು
ಕಾಣದ ಕಾಲಗರ್ಭದ
ಪ್ರತೀ ಗಳಿಗೆಯ ಭಕ್ತರಿಗೆಲ್ಲಾ ದಾರ್ಶನಿಕರು....!!!

ಅಲ್ಪ ಸಂಖ್ಯಾತ ಸಿಂಪಿ ಮತ ಪಂಥದವರು
11ನೇ ಶತಮಾನದ ಇತಿಹಾಸದವರು
ಶಿವನ ಆತ್ಮಕ್ಕೆ ಭಕ್ತಿಯ
ಪರಾಕಾಷ್ಟತೆಯ ಸಾರ್ವಭೌಮರು...!!!

ನಾವೆಲ್ಲಾ ಬಟ್ಟೆಯನ್ನು ಹೊಲಿಯುವವರು
ನಮ್ಮ ಕಾಯಕದ ಕುಲ ಕಸುಬು
ಹೊಲಿಗೆ ಕೆಲಸ ಮಾಡುವವರು
ವೃತ್ತಿಯ ಪ್ರವೃತ್ತಿಯ ಸಿಂಪಿಗರು....!!!

ಸಾರ್ವತ್ರಿಕ ಸಮಾಜದಲ್ಲಿ
ಸ್ವಾಭಿಮಾನದ ಶ್ರೇಷ್ಠರು
ಆಚಾರ ವಿಚಾರ ನಡತೆಯಲ್ಲಿ
ಸಂಪ್ರದಾಯಕ್ಕೆ ಕಟಿ ಬದ್ಧರು.....!!!

ವರ್ತಮಾನ ಕುಲ ಸಿಂಪಿಗರು
ಸಾರ್ವತ್ರಿಕ ಸಮಗ್ರ ಐಕ್ಯತೆಯ
ಸಿಂಪಿ ಮನುಜ ಮನಸುಗಳೆಲ್ಲ ಒಂದಾಗಿ
ಎಲ್ಲರೊಳಗೊಂದಾಗಿ ಒಂದಾಗುವ
ಪ್ರತಿಜ್ಞೆ ಮಾಡೋಣ...!!!

12ನೇ ಶತಮಾನದ ಬಸವಣ್ಣನ ಆಣತಿಯಂತೆ
ಇವನಾರವ ಇವನಾರವ
ಇವ ನಮ್ಮವ ಇವ ನಮ್ಮವ
ಈ ಧ್ಯೇಯವಾಕ್ಯವನ್ನು ಅನುಸರಿಸೋಣ
ಜೈ ಶಿವ ಸಿಂಪಿ ಬಾಂಧವರು

- ಸಂಗಮ್ ಟಿ. ಜಿ.
ಗಣಿತ ಶಿಕ್ಷಕರು, ಕೊಟ್ಟೂರು.

# ನಗರದಲ್ಲಿ ಇಂದು ಜಿಲ್ಲಾ ಶಿವಸಿಂಪಿ ಸಮಾವೇಶ, ಶಿವದಾಸಿಮಯ್ಯ ಜಯಂತಿ



ದಾವಣಗೆರೆ, ಆ. 12-ಜಿಲ್ಲಾ ಶಿವಸಿಂಪಿ ಸಮಾವೇಶ, ಕುಲಗುರು ಶ್ರೀ ಶಿವದಾಸಿಮಯ್ಯ ಜಯಂತ್ಯುತ್ಸವ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭವು ನಾಳೆ ದಿನಾಂಕ 13 ರ ಭಾನುವಾರ ಬೆಳಿಗ್ಗೆ 11 ಗಂಟೆಗೆ ಆವರಗೆರೆ ಸಮೀಪದ ಶಂಕರಲೀಲಾ ಕನ್ವೆನ್ಷನ್ ಹಾಲ್‌ನಲ್ಲಿ ಹಮ್ಮಿಕೊಂಡಿರುವುದಾಗಿ ಸುದ್ದಿಗೋಷ್ಠಿಯಲ್ಲಿ ಸಮಾಜದ ಬೂಸ್ನೂರು ಗುರುಬಸಪ್ಪ ಮಾಹಿತಿ ನೀಡಿದರು.

ತುಮಕೂರು ಸಿದ್ಧಗಂಗಾ ಮಠದ ಪೀಠಾಧ್ಯಕ್ಷರಾದ ಶ್ರೀ ಸಿದ್ಧಲಿಂಗ ಸ್ವಾಮೀಜಿ ಕಾರ್ಯಕ್ರಮಕ್ಕೆ ಚಾಲನೆ ನೀಡುವರು. ಮುರುಘಾ ಮಠದ ಶ್ರೀ ಬಸವಪ್ರಭು ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದು, ವಿಶೇಷ ಆಹ್ವಾನಿತರಾಗಿ ಚಿತ್ರನಟ ದೊಡ್ಡಣ್ಣ ಆಗಮಿಸಲಿದ್ದಾರೆ.

ಮುಖ್ಯಅತಿಥಿಗಳಾಗಿ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಸಮಾಜದ ಗೌರವಾಧ್ಯಕ್ಷ ಸಿ.ಎಲ್. ಚಂದ್ರಧರ, ತುಮಕೂರು ವಿವಿಯ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಡಾ. ಡಿ.ಎಂ. ಕೊಟ್ರೇಶ್ ಮತ್ತಿತರರು ಭಾಗವಹಿಸಲಿದ್ದಾರೆ.

2022 ಮತ್ತು 2023 ರ ಸಾಲಿನ ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿ ಪರೀಕ್ಷೆಗಳಲ್ಲಿ ಶೇ. 75 ಕ್ಕೂ ಹೆಚ್ಚು ಅಂಕಗಳನ್ನು ಪಡೆದ ಶಿವಸಿಂಪಿ ಸಮಾಜದ ಎಸ್ಸೆಸ್ಸೆಲ್ಸಿ 46 ಮತ್ತು ಪಿಯುಸಿಯ 51 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುತ್ತಿದೆ ಎಂದು ತಿಳಿಸಿದರು. ಕಡಿಮೆ ಜನ ಸಂಖ್ಯೆ ಹೊಂದಿರುವ ಶಿವಸಿಂಪಿ ಸಮಾಜ ಇದೀಗ ಜಾಗೃತವಾಗುತ್ತಿದ್ದು, ಹಲವು ದಶಕಗಳಿಂದ ಹೋರಾಟ ನಡೆಸುತ್ತಾ ಬಂದಿದ್ದರೂ ಸಹ ಸರ್ಕಾರದಿಂದ ಯಾವುದೇ ಸೌಲಭ್ಯಗಳನ್ನು ಪಡೆಯಲು ಸಾಧ್ಯವಾಗಿಲ್ಲ. ಸಂಘಟಿತರಾಗುವ ಅನಿವಾರ್ಯತೆ ಎದುರಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಸಮಾಜದ ಮುಖಂಡರಾದ ಬೂಸ್ನೂರು ಪ್ರಕಾಶ್, ಹೆಚ್.ಕೆ. ಹೇಮಣ್ಣ, ಜಗದೀಶಪ್ಪ ಬಾವಿಕಟ್ಟಿ, ಬಿ.ಎಂ. ಶಿವಕುಮಾರ್, ಜ್ಞಾನೇಶ್ವರ ಜವಳಿ ಉಪಸ್ಥಿತರಿದ್ದರು.

# ರಸ್ತೆ ಅಭಿವೃದ್ಧಿ ಕಾಮಗಾರಿಗೆ ಸಚಿವ ಎಸ್ಸೆಸ್ಸೆಮ್ ಚಾಲನೆ



ದಾವಣಗೆರೆ, ಆ.12- ಮಹಾನಗರ ಪಾಲಿಕೆಯ 30 ನೇ ವಾರ್ಡ್ ವ್ಯಾಪ್ತಿಯ ಪಿ.ಬಸವನಗೌಡ ಬಡಾವಣೆ 2 ನೇ ಮೇನ್, 6 ನೇ ಕ್ರಾಸ್‌ನಲ್ಲಿ 27.75 ಲಕ್ಷ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಇಂದು ಸಂಜೆ ಚಾಲನೆ ನೀಡಿದರು.

ಇದೇ ಸಂದರ್ಭದಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷ ಜನಪರ ಆಡಳಿತ ನೀಡುತ್ತಿದ್ದು, ರಾಜ್ಯವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯುತ್ತಿದೆ. ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರ ಹೆಸರನ್ನು ಉಳಿಸುವ ನಿಟ್ಟಿನಲ್ಲಿ ನಾವುಗಳು ಅಭಿವೃದ್ಧಿ ಕಾರ್ಯಗಳನ್ನು ಮಾಡಿ ತೋರಿಸಬೇಕಾಗಿದೆ ಎಂದರು.

ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಪಕ್ಷದ ಕಾರ್ಯಕರ್ತರು, ಮುಖಂಡರು ಕಾಂಗ್ರೆಸ್ ಅಭ್ಯರ್ಥಿಯನ್ನು ಗೆಲ್ಲಿಸಲು ಪಣ ತೊಡಬೇಕಾಗಿದೆ ಎಂದು ಹೇಳಿದರು.

ಅನ್ನಭಾಗ್ಯ ಯೋಜನೆ, ಉಚಿತ ವಿದ್ಯುತ್, ಬಸ್ ಪ್ರಯಾಣ, ಮನೆ ಯಾಜಮಾನಿಗೆ ಎರಡು ಸಾವಿರ ರೂ. ಹಣವನ್ನು ನೇರವಾಗಿ ಖಾತೆಗೆ ಜಮಾ ಮಾಡುವುದು ಸೇರಿದಂತೆ ಐದು ಗ್ಯಾರಂಟಿಗಳನ್ನು ಸಮರ್ಪಕವಾಗಿ ಜಾರಿ ಮಾಡುವ ಮೂಲಕ ಜನರ ಆಶೋತ್ತರಗಳಿಗೆ ಸ್ಪಂದಿಸುವ ಕೆಲಸವನ್ನು ರಾಜ್ಯ ಸರ್ಕಾರ ಮಾಡುತ್ತಿದೆ ಎಂದರು.

ಪಿ. ಬಸವನಗೌಡ ಬಡಾವಣೆಯ 6 ನೇ ಕ್ರಾಸ್ ರಸ್ತೆ ಅಭಿವೃದ್ಧಿಪಡಿಸಲು ಚಾಲನೆ ನೀಡಲಾಗಿದ್ದು, ಈ ಭಾಗದ ರೈಲ್ವೆ ಅಂಡರ್ ಪಾಸ್, ಸ್ಮಶಾನ ದಾರಿ ಬಗ್ಗೆ ಸರಿಯಾದ ತನಿಖೆ ನಡೆಸಿ ಮುಂದಿನ ದಿನಗಳಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು ಎಂದು ತಿಳಿಸಿದರು.

ಕಾಂಗ್ರೆಸ್ ಪಕ್ಷದ ಅಭಿವೃದ್ಧಿ ಕೆಲಸಗಳನ್ನು ಮೆಚ್ಚಿ ಜಯಮ್ಮ ಗೋಪಿನಾಯ್ಕ ಬಿಜೆಪಿ ತೊರೆದು ಕಾಂಗ್ರೆಸ್ ಸೇರ್ಪಡೆಯಾಗಿದ್ದು, ತಮ್ಮ ವಾರ್ಡ್ ಕಾಮಗಾರಿಗಳು, ಜನಪರ ಕೆಲಸಗಳ ಬಗ್ಗೆ ಗಮನಹರಿಸುವಂತೆ ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಮಾಜಿ ಮೇಯರ್ ಜಯಮ್ಮ ಗೋಪಿನಾಯ್ಕ, 30 ನೇ ವಾರ್ಡ್ ಕಾಂಗ್ರೆಸ್ ಮುಖಂಡ ಗೋಪಿನಾಯ್ಕ, ಜಿ. ನವೀನ್, ಪಾಲಿಕೆ ಸದಸ್ಯರಾದ ಕೆ. ಚಮನ್‌ಸಾಬ್, ಗಡಿಗುಡಾಳ್ ಮಂಜುನಾಥ್, ಗಣೇಶ್ ಹುಲ್ಮನಿ, ಮಹಾನಗರ ಪಾಲಿಕೆ ಆಯುಕ್ತರಾದ ರೇಣುಕ, ತಹಶೀಲ್ದಾರ್. ಡಾ. ಅಶ್ವತ್ಥ್, ಇಂಜಿನಿಯರ್ ಬಿರಾದಾರ್ ಮತ್ತಿತರರು ಉಪಸ್ಥಿತರಿದ್ದರು.

# 183 ಎನ್‌ಕೌಂಟರ್ ವರದಿ ಕೇಳಿದ ಸುಪ್ರೀಂ ಕೋರ್ಟ್

ನವದೆಹಲಿ, ಆ. 12 – ಪೊಲೀಸ್ ಕಸ್ಟಡಿಯಲ್ಲಿರು ವಾಗ ಭೂಗತ ಆತಿಕ್ ಅಹಮದ್ ಹಾಗೂ ಆತನ ಸಹೋದರ ಅಶ್ರಫ್ ಹತ್ಯೆಯಾಗಿರುವ ಬಗ್ಗೆ ಉತ್ತರ ಪ್ರದೇಶ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿರುವ ಸುಪ್ರೀಂ ಕೋರ್ಟ್, 2017ರ ನಂತರ ನಡೆದಿರುವ 183 ಪೊಲೀಸ್ ಎನ್‌ಕೌಂಟರ್‌ಗಳ ವರದಿ ಕೇಳಿದೆ.

ಆರು ವಾರಗಳ ಒಳಗೆ ಈ ಬಗ್ಗೆ ಪ್ರಮಾಣ ಪತ್ರ ನೀಡುವಂತೆ ನ್ಯಾಯಮೂರ್ತಿಗಳಾದ ಎಸ್. ರವೀಂದ್ರ ಭಟ್ ಹಾಗೂ ಅರವಿಂದ ಕುಮಾರ್ ಅವರನ್ನು ಒಳಗೊಂಡ ಪೀಠ ತಿಳಿಸಿದೆ. ಆತಿಕ್‌ಗೆ ಐದರಿಂದ ಹತ್ತು ಜನ ರಕ್ಷಣೆ ನೀಡಿದ್ದರು. ಹೀಗಿರುವಾಗ ಯಾರೋ ಬಂದು ಗುಂಡು ಹಾರಿಸಲು ಹೇಗೆ ಸಾಧ್ಯ? ಈ ವಿಷಯ ಜಟಿಲವಾಗಿದೆ ಎಂದು ಸುಪ್ರೀಂ ಕೋರ್ಟ್ ಪೀಠ ಹೇಳಿದೆ. ಭೂಗತರ ಸಾವಿನ ಬಗ್ಗೆ ವಿವರವಾದ ತನಿಖೆ ನಡೆಸಬೇಕೆಂದು ಆತಿಕ್ ಸಹೋದರಿ ಆಯಿಶಾ ನೂರಿ ಅವರು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದರು. ಕಳೆದ ಏಪ್ರಿಲ್ 15ರಂದು ಅಹಮದ್ ಹಾಗೂ ಅಶ್ರಫ್ ಅವರನ್ನು ಪತ್ರಕರ್ತರ ಸೋಗಿನಲ್ಲಿ ಬಂದ ಮೂವರು ಹತ್ಯೆ ಮಾಡಿದ್ದರು.

# ಸೊಸೈಟಿ ಉಳಿಸಿ, ರೈತರಿಗೆ ಅನುಕೂಲ ಮಾಡಿಕೊಡುವುದು ಎಲ್ಲರ ಕರ್ತವ್ಯ

ದಾವಣಗೆರೆ, ಆ. 12- ದಾವಣಗೆರೆ ವ್ಯವಸಾಯಗಾರರ ಪರಿವರ್ತನಾ ಕೈಗಾರಿಕಾ ಮತ್ತು ವ್ಯಾಪಾರೋದ್ಯಮ ಸಹಕಾರ ಸಂಘ ಕಾನೂನು ಬಾಹಿರವಾಗಿ ಸೈಟುಗಳನ್ನು ಹಂಚಿಕೆ ಮಾಡಿದ್ದು, ಕಾರ್ಯಕಾರಿ ಮಂಡಳಿಯವರು ತಮಗೆ ಬೇಕಾದ ಅನುಕೂಲ ಮಾಡಿಕೊಂಡಿದ್ದು, ಇನ್ನೂ ಕೆಲವು ಅವ್ಯವಹಾರಗಳ ಪೈಕಿ ಸೊಸೈಟಿ ತನ್ನ ಕಾರ್ಯ ಚಟುವಟಿಕೆಗಳನ್ನು ಸ್ಥಗಿತಗೊಳಿಸಿದೆ ಎಂದು ವಿಧಾನ ಪರಿಷತ್ ಅಧ್ಯಕ್ಷ ಮೋಹನ್ ಕೊಂಡಜ್ಜಿ ತಿಳಿಸಿದ್ದಾರೆ.

ವಿಧಾನ ಪರಿಷತ್ ಸದಸ್ಯನಾಗಿದ್ದ ಆರು ವರ್ಷಗಳ ಕಾಲವೂ ಈ ಅವ್ಯವಹಾರಗಳ ವಿರುದ್ಧ ಸಹಕಾರ ಇಲಾಖೆಯಲ್ಲಿ ಕ್ರಿಮಿನಲ್ ಕೇಸುಗಳನ್ನು ದಾಖಲಿಸಿದ್ದೆ. ಅದಕ್ಕೆ ಕೆಲವು ಸದಸ್ಯರ ಬೆಂಬಲವೂ ಇತ್ತು. ಇದೀಗ ಈ ಪ್ರಕರಣ ದೊಡ್ಡದಾಗಿದೆ.

ಈ ಸಂದರ್ಭದಲ್ಲಿ ಸೊಸೈಟಿಯ ಆಸ್ತಿ ಉಳಿಸಿ ರೈತರಿಗೆ ಅನುಕೂಲ ಮಾಡಿಕೊಡಬೇಕಾಗಿರುವುದು ಎಲ್ಲಾ ಪ್ರಜ್ಞಾವಂತರ ಕರ್ತವ್ಯ ಎಂದು ಭಾವಿಸಿದ್ದೇನೆ. ಈಗಾಗಲೇ ಸೊಸೈಟಿಯ ಒಡೆತನದಲ್ಲಿ ದಾವಣಗೆರೆ ಹೃದಯ ಭಾಗದಲ್ಲಿರುವ 8 ಎಕರೆ ಭೂಮಿ ಇದೆ. ಈ ಭೂಮಿಯಲ್ಲಿ ರೈತರಿಗಾಗಿ ಒಂದು ವಿಶ್ವಾಸಾರ್ಹ ನಿಷ್ಠಾವಂತ ಸಂಸ್ಥೆಯನ್ನು ಸ್ಥಾಪಿಸಲು ಶಾಮನೂರು ಶಿವಶಂಕರಪ್ಪ ಅವರನ್ನು ಕೋರಿದ್ದೇವೆ ಎಂದು ತಿಳಿಸಿದ್ದಾರೆ.

# ಅಮಾನತ್ತು ಸಂಸದರು ಸಮಿತಿಗಳಲ್ಲಿ ಪಾಲ್ಗೊಳ್ಳುವಂತಿಲ್ಲ

ನವದೆಹಲಿ, ಆ. 12 – ಅಮಾನತ್ತುಗೊಂಡಿರುವ ಸಂಸದರು ಸಂಸದೀಯ ಸಮಿತಿಗಳ ಸಭೆಯಲ್ಲಿ ಪಾಲ್ಗೊಳ್ಳುವಂತಿಲ್ಲ. ಅಮಾನತ್ತು ವಾಪಸ್ ಪಡೆಯುವವರೆಗೆ ಅವರು ಸಮಿತಿಯ ಸದಸ್ಯರು ಇಲ್ಲವೇ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುವಂತಿಲ್ಲ. ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ಅವರೂ ಅಮಾನತ್ತುಗೊಂಡವರಲ್ಲಿ ಸೇರಿದ್ದಾರೆ. ಅವರು ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ ಅಧ್ಯಕ್ಷರಾಗಿದ್ದಾರೆ. ಅವರು ಗೃಹ ವ್ಯವಹಾರಗಳ ಸ್ಥಾಯಿ ಸಮಿತಿ ಸೇರಿದಂತೆ ಹಲವು ಸಮಿತಿಗಳಲ್ಲಿ ಸದಸ್ಯರಾಗಿದ್ದಾರೆ. ಆದರೆ, ಅವರು ಸರ್ಕಾರದ ವಿವಿಧ ಆಯ್ಕೆ ಸಮಿತಿಗಳ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ ಎಂದು ಮೂಲಗಳು ತಿಳಿಸಿವೆ. ಅಮಾನತ್ತಿನ ವಿರುದ್ಧ ಕೋರ್ಟ್ ಮೊರೆ ಹೋಗಲು ಪರಿಶೀಲಿಸುತ್ತಿರುವುದಾಗಿ ಚೌಧರಿ ತಿಳಿಸಿದ್ದಾರೆ.

# ಭರಮಸಾಗರ ಗ್ರಾ.ಪಂ. ಅಧ್ಯಕ್ಷರಾಗಿ ರತ್ನಮ್ಮ ಆಯ್ಕೆ





ಭರಮಸಾಗರ, ಆ. 12- ಹಲಸಿನ ಹಣ್ಣು ಮಾರಾಟ ಮಾಡುವಲ್ಲಿ ಹೆಸರುವಾಸಿಯಾಗಿದ್ದ ಗಂಗಮ್ಮ, ಹೆಚ್. ರಂಗಪ್ಪನವರ ಪುತ್ರಿ ರತ್ನಮ್ಮ ಜಯಪ್ಪ ಅವರು ಭರಮಸಾಗರ ಗ್ರಾಮ ಪಂಚಾಯತಿ ಅಧ್ಯಕ್ಷೆಯಾಗಿ, ಉಪಾಧ್ಯಕ್ಷರಾಗಿ ಕೋಡಿರಂಗವ್ವನಹಳ್ಳಿಯ ಜ್ಯೋತಿ ರುದ್ರಮುನಿ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಗ್ರಾಮ ಪಂಚಾಯಿತಿಯಲ್ಲಿ 26 ಸದಸ್ಯರಿದ್ದು, ಈ ಸಾರಿ ಪರಿಶಿಷ್ಟ ಪಂಗಡಕ್ಕೆ ಮೀಸಲಾಗಿದ್ದು, ಅದರ ಪ್ರಕಾರ ಚುನಾವಣೆ ನಡೆಸಿ ಅಧ್ಯಕ್ಷರ, ಉಪಾಧ್ಯಕ್ಷರ ಆಯ್ಕೆಯನ್ನು ಅಧಿಕಾರಿ ಟಿ.ಆರ್. ಶಶಿಕಲಾ ಘೋಷಿಸಿದ್ದಾರೆ. ಈ ಸಂದರ್ಭದಲ್ಲಿ ಕೋಡಿ ರಂಗವ್ವನಹಳ್ಳಿ ಹನುಮಂತಪ್ಪ, ಕೆಟಿಸಿ ಮಂಜುನಾಥ್, ಶಮೀನ್ ಪಾಷಾ, ಸಿ.ಟಿ. ಮಹಾಂತೇಶ್, ಎಸ್.ಎಂ.ಎಲ್. ಪ್ರವೀಣ್, ಟಿ.ಆರ್. ಚನ್ನೇಶ, ಶಿವಣ್ಣ, ಬುಡನ್ ಸಾಬ್, ಅಲ್ಲಾಬಕ್ಷಿ, ಪರ್ವಿನ್, ಶ್ರೀಧರ್, ಹರೀಶ, ಗೌಡರ ರಾಜಣ್ಣ, ರವಿನಾಯಕ್, ರುದ್ರೇಶ್, ನಿರ್ಮಲ, ಮಂಜುಳಮ್ಮ, ಇಬ್ರಾಹಿಂ ಮತ್ತಿತರರಿದ್ದರು.

# ಬಸವನಾಳು ಗ್ರಾ.ಪಂ. ಅಧ್ಯಕ್ಷರಾಗಿ ನೇತ್ರಾವತಿ



ದಾವಣಗೆರೆ, ಆ. 11 - ತಾಲ್ಲೂಕಿನ ಬಸವನಾಳು ಗ್ರಾಮ ಪಂಚಾಯಿತಿಯ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಸ್ಥಾನಕ್ಕೆ ಜರುಗಿದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಯು. ನೇತ್ರಾವತಿ ಹಾಗೂ ಉಪಾಧ್ಯಕ್ಷರಾಗಿ ಬಿ. ಕುಬೇರಪ್ಪ ಅವರು ಅವಿರೋಧ ಆಯ್ಕೆಯಾಗಿದ್ದಾರೆ. ಚುನಾವಣೆಯಲ್ಲಿ ಚುನಾವಣಾಧಿಕಾರಿಯಾಗಿ ರವೀಂದ್ರನಾಯ್ಕ್ ಕಾರ್ಯ ನಿರ್ವಹಿಸಿದರು. ಮುದೇಗೌಡ್ರು ಗಿರೀಶ್, ಕರಿಬಸಪ್ಪ ಬೇತೂರು, ಮಾಗಾನಹಳ್ಳಿ ಪರಶುರಾಮಪ್ಪ, ಹೆಚ್.ಜಿ. ಉಮೇಶ್ ಸೇರಿದಂತೆ ಗ್ರಾಮದ ಮುಖಂಡರು ಉಪಸ್ಥಿತರಿದ್ದರು.

## ನಿವೃತ್ತರ ಒಕ್ಕೂಟದಿಂದ ನಗರದಲ್ಲಿ ಇಂದು ಪ್ರತಿಭಾ ಪುರಸ್ಕಾರ

ದಾವಣಗೆರೆ-ಚಿತ್ರದುರ್ಗ ಜಿಲ್ಲಾ ಬ್ಯಾಂಕ್ ನಿವೃತ್ತರ ಒಕ್ಕೂಟದ ವತಿಯಿಂದ ಇಂದು ಬೆಳಿಗ್ಗೆ 11 ಕ್ಕೆ ಶರಣ ಮಾಗನೂರು ಬಸಪ್ಪ ಕಾಲೇಜು ಸಭಾಂಗಣದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭ ನಡೆಯಲಿದೆ. ಎಸ್.ಟಿ. ಶಾಂತಗಂಗಾಧರ್ ಅಧ್ಯಕ್ಷತೆ ವಹಿಸುವರು. ಎಂ.ಬಿ. ಸಂಗಮೇಶ್ವರಗೌಡ್ರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳು : ಬಿ.ಎಂ. ದಾರುಕೇಶ್, ಅಜಿತ್‌ಕುಮಾರ್ ನ್ಯಾಮತಿ, ಬಿ. ರಂಗಸ್ವಾಮಿ ಮತ್ತಿತರರು.

## ನಾಡಿದ್ದು ಕಣ್ಣು, ಕಿವಿ, ಮೂಗು, ತಪಾಸಣೆ

ದಾವಣಗೆರೆ, ಆ.12- ವೀರೇಶ್ ಹಾಗೂ ವಾಗೀಶ್ ಕಣ್ಣು, ಕಿವಿ, ಮೂಗು, ಗಂಟಲು ಸೂಪರ್ ಸ್ಪೆಷಾಲಿಟಿ ಕೇರ್ ಆಸ್ಪತ್ರೆಯಲ್ಲಿ ಇದೇ ದಿನಾಂಕ 15 ರಂದು ಕಣ್ಣು, ಕಿವಿ, ಮೂಗು, ಗಂಟಲು ತಪಾಸಣಾ ಶಿಬಿರ ನಡೆಯಲಿದೆ. ಸಂಪರ್ಕಿಸಿ : ಫೋ: 08192-231431.


**ಬೇಕಾಗಿದ್ದಾರೆ**

1) ಆಫೀಸ್ ಕೆಲಸಕ್ಕಾಗಿ - ಪದವೀಧರರು
2) ಉಪನ್ಯಾಸಕರು - ಎಂ.ಎಸ್ಸಿ, ನರ್ಸಿಂಗ್, ಬಯೋ ಕೆಮಿಸ್ಟ್ರಿ, ಮೈಕ್ರೋ ಬಯೋಲಜಿ, ಸಿಬಿಝಡ್, ಬಯೋಲಜಿ, ಕೆಮಿಸ್ಟ್ರಿ ಇತರೆ. ಕಂಪ್ಯೂಟರ್ ಜ್ಞಾನ ಹೊಂದಿರಬೇಕು.

ಅನುಭವ ಇದ್ದವರಿಗೆ ಮೊದಲ ಆದ್ಯತೆ.
ಸಂಪರ್ಕಿಸಿ :
86180 50497, 70195 86789



**ಅರಸಿ ಕನ್ಸಲ್ಟೆನ್ಸಿ ಸರ್ವೀಸಸ್**

ನಮ್ಮಲ್ಲಿ ಕಟ್ಟಡ ಪರವಾನಿಗೆ (ದಾವಣಗೆರೆ ಮಹಾನಗರ ಪಾಲಿಕೆ ಮತ್ತು DHUDA), ಬಿಲ್ಡಿಂಗ್ ಪ್ಲಾನ್ (ವಾಸ್ತು ಪ್ರಕಾರ), ಎಸ್ಟಿಮೇಷನ್, ಕನ್‌ಸ್ಟ್ರಕ್ಷನ್ ಮತ್ತು ಮೆಟೀರಿಯಲ್ ಕಾಂಟ್ರ್ಯಾಕ್ಟ್ ಹಾಗೂ ಅಲಿನೇಷನ್, ಲೇಔಟ್ ಪ್ಲಾನ್ ಮತ್ತು ಅಭಿವೃದ್ಧಿ (Development) ಮಾಡಿಕೊಡಲಾಗುವುದು.

ಸಂಪರ್ಕಿಸಿ : ಪ್ರಿಯಾಂಕ ಜೆ.ಪಿ., ಇಂಜಿನಿಯರ್
+91 70190 70400

#1066, 2ನೇ ಮೇನ್, 1ನೇ ಕ್ರಾಸ್, ಓಂಕಾರ ಗಣಪತಿ ದೇವಸ್ಥಾನ ಎದುರು, ನಿಜಲಿಂಗಪ್ಪ ಲೇಔಟ್, ದಾವಣಗೆರೆ-577004.


**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ**
ದಾವಣಗೆರೆ ವಿಭಾಗ, ದಾವಣಗೆರೆ

ಸಂಖ್ಯೆ: ಕರಾಸಾ/ದಾವಿ/ಸಂಚಾರ/ವಾಣಿಜ್ಯ/1307/2023–24 ದಿನಾಂಕ: 10.08.2023

**ಇ–ಟೆಂಡರ್ / ಮ್ಯಾನ್ಯುಯಲ್ ಟೆಂಡರ್ / ಸಂಧಾನ ಪ್ರಕಟಣೆ ಸಂಖ್ಯೆ: 03/2023–24**

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ದಾವಣಗೆರೆ ವಿಭಾಗದ ವ್ಯಾಪ್ತಿಗೆ ಬರುವ, ತಾತ್ಕಾಲಿಕ ದಾವಣಗೆರೆ ಬಸ್ ನಿಲ್ದಾಣದ ದ್ವಿ–ಚಕ್ರ ವಾಹನ ನಿಲ್ದಾಣಕ್ಕೆ ಪರವಾನಗಿದಾರರನ್ನು ಆಯ್ಕೆ ಮಾಡಲು ಇ–ಟೆಂಡರ್ ಮೂಲಕ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ) ಅರ್ಜಿ ಆಹ್ವಾನಿಸಲಾಗಿದೆ.

ತಾತ್ಕಾಲಿಕ ದಾವಣಗೆರೆ ಬಸ್ ನಿಲ್ದಾಣದ ನಾಣ್ಯಚಾಲಿತ ಮಾನವ ತೂಕದ ಯಂತ್ರಕ್ಕೆ (ವಿಕಲಚೇತನ), ಪರವಾನಗಿದಾರರನ್ನು ಆಯ್ಕೆ ಮಾಡಲು ಮ್ಯಾನ್ಯುಯಲ್ ಟೆಂಡರ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

**ಮಲೆಬೆನ್ನೂರು** ಬಸ್ ನಿಲ್ದಾಣದ ಜನರಲ್ ಮಳಿಗೆ ಸಂಖ್ಯೆ–01 ಕ್ಕೆ ಹಾಗೂ ಹರಿಹರ ಬಸ್ ನಿಲ್ದಾಣದ ದ್ವಿ–ಚಕ್ರ ವಾಹನ ನಿಲ್ದಾಣಕ್ಕೆ ಪರವಾನಗಿದಾರರುನ್ನು ಆಯ್ಕೆ ಮಾಡಲು ಸಂಧಾನ ಮೂಲಕ (ಮಾತುಕತೆ ಮೂಲಕ) ಅರ್ಜಿ ಆಹ್ವಾನಿಸಲಾಗಿದೆ.

ಸದರಿ ಮಾಹಿತಿಯನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in ನಲ್ಲಿ ಮತ್ತು ನಿಗಮದ ವೆಬ್‌ಸೈಟ್ ksrtc.karnataka.gov.in ನಲ್ಲಿ ದಿ: 10.08.2023 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ. ನಿಗಮ, ದಾವಣಗೆರೆ ವಿಭಾಗ – 577 002 ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/–
ವಿಭಾಗೀಯ ನಿಯಂತ್ರಣಾಧಿಕಾರಿ
ಕ.ರಾ.ರ.ಸಾ. ನಿಗಮ, ದಾವಣಗೆರೆ ವಿಭಾಗ

ವಾಸಾಸಂಇ/ಬೆಂ.ನಗರ/889A/ಆಕಾರ್/2023–24






**ಜನ್ಮ ದಿನದ ಶುಭಾಶಯಗಳು**

ಇಂದು ತಮ್ಮ ಜನ್ಮ ದಿನದ ಸಂಭ್ರಮದಲ್ಲಿರುವ ನಮ್ಮ ಆತ್ಮೀಯ ಸ್ನೇಹಿತರೂ, ದಾವಣಗೆರೆ ಜಿಲ್ಲಾ ಬಿಜೆಪಿ ಕಾನೂನು ಮತ್ತು ಸಂಸದೀಯ ಪ್ರಕೋಷ್ಠದ ಸಂಚಾಲಕರೂ, ದಾವಣಗೆರೆ ವಕೀಲರ ಸಂಘದ ನಿಕಟಪೂರ್ವ ಉಪಾಧ್ಯಕ್ಷರೂ, ಬಿಜೆಪಿ ಮುಖಂಡರೂ, ವಕೀಲರೂ ಆದ

**ಶ್ರೀ ಹೆಚ್. ದಿವಾಕರ್**

ಅವರಿಗೆ ಹುಟ್ಟುಹಬ್ಬದ ಶುಭಾಶಯಗಳು.

ಶ್ರೀಯುತರಿಗೆ ಆರೋಗ್ಯ, ಐಶ್ವರ್ಯ ಕೊಟ್ಟು, ಮುಂದಿನ ದಿನಗಳಲ್ಲಿ ಇನ್ನು ಹೆಚ್ಚಿನ ಉನ್ನತ ಸ್ಥಾನಕ್ಕೆ ಏರಲಿ ಎಂದು ಶ್ರೀ ಚೌಡೇಶ್ವರಿ ದೇವಿಯಲ್ಲಿ ಪ್ರಾರ್ಥಿಸುತ್ತೇವೆ.

ಅಧ್ಯಕ್ಷರು ಮತ್ತು ಕಾರ್ಯದರ್ಶಿ, ಪದಾಧಿಕಾರಿಗಳು
ಶ್ರೀ ಚೌಡೇಶ್ವರಿ ದೇವಸ್ಥಾನ ಸಮಿತಿ
1ನೇ ಮುಖ್ಯರಸ್ತೆ, ವಿನೋಬನಗರ, ದಾವಣಗೆರೆ.

✦ ಶ್ರೀನಿವಾಸ ದಾಸಕರಿಯಪ್ಪ ಗೆಳೆಯರ ಬಳಗ
✦ ಹ್ಯಾಪಿ ಫ್ರೆಂಡ್ಸ್ ಗ್ರೂಪ್, ವಿನೋಬನಗರ
✦ ಇಂಡಿಯನ್ ಕಾಫಿ ಬಾರ್ ಗೆಳೆಯರ ಬಳಗ, ಹಳೇ ಬಸ್ ನಿಲ್ದಾಣ

